"ಮುಖಗವಸು ಧರಿಸಿ, ಸ್ಯಾನಿಟೈಸರ್ ಬಳಸಿ" "ಕಡ್ಡಾಯವಾಗಿ ಸಾಮಾಜಿಕ ಅಂತರ ಕಾಪಾಡಿ"


ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
*ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ*
***D.P.A.R***
Email: dparkud@gmail.com

NAAC Accredited with "A" Grade-2022

ಸ್ವಾತಂತ್ರ್ಯದ ಅಮೃತ ಮಹೋತ್ಸವ
ಪಾವಟೆನಗರ, ಧಾರವಾಡ.
ದೂರವಾಣಿ ಸಂ.2215349
Website : www.kud.ac.in


ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/ಜಾಹೀರಾತು/2023–24/1491 ದಿನಾಂಕ: 17.10.2023

# ನೇಮಕಾತಿ ಅಧಿಸೂಚನೆ

**ವಿಷಯ:** ಕರ್ನಾಟಕ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಮಾಧ್ಯಮಿಕ ಶಾಲೆಯಲ್ಲಿ ಖಾಲಿಯಿರುವ ಸಹಾಯಕ ಶಿಕ್ಷಕರು, ವಿಶೇಷ ಶಿಕ್ಷಕರ ಮತ್ತು ಸಹಾಯಕ ಹೌಸ್ ಮಾಸ್ಟರ್ ಹಾಗೂ ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಖಾಲಿಯಿರುವ ಸಹಾಯಕ ಶಿಕ್ಷಕರು ಹುದ್ದೆಗಳನ್ನು ನೇರ–ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಿದ ಕುರಿತು.

**ಉಲ್ಲೇಖ:** 1) ಕರ್ನಾಟಕ ವಿಶ್ವವಿದ್ಯಾಲಯದ ಪ್ರಸ್ತುತ ವೃಂದ ಮತ್ತು ನೇಮಕಾತಿ ಅನುಶಾಸನ–1996.
2) ಸರ್ಕಾರಿ ಆದೇಶ ನಂ. ಸಿಆಸುಇ 53 ಸೇನೆನಿ 2007 ದಿನಾಂಕ: 04.01.2008.
3) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಅವರ ಪತ್ರ ಸಂಖ್ಯೆ. ಇಡಿ 11 ಯುಕೆವಿ 2021 ದಿನಾಂಕ : 11.04.2022.
4) ಸರ್ಕಾರಿ ಆದೇಶ ನಂ. ಸಿಆಸುಇ 01 ಸೆಹಿಮ 2022 ದಿನಾಂಕ: 28.12.2022.
5) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಅನುಮೋದನೆ ನೀಡಿದ ಪತ್ರ ಸಂಖ್ಯೆ. ಸಕನನಿ/ಮೀಜಾಕೋ–1/ಸಿಆರ್–56/2018–19 ದಿನಾಂಕ : 05.07.2023.
6) ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಅನುಮೋದನೆ ನೀಡಿದ ಪತ್ರ ಸಂಖ್ಯೆ. BCWD-19014/7/2023-BCWD_GB-BCWD ದಿನಾಂಕ: 15.06.2023 ಮತ್ತು ದಿನಾಂಕ: 16.08.2023
7) ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ಪತ್ರ ಸಂಂಕ್ಯೆ. GS 13 KUM 2023 ದಿನಾಂಕ: 18.08.2023.
8) ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ. 7 ದಿನಾಂಕ: 02.09.2023.
9) ಕುಲಪತಿಗಳ ಅನುಮೋದನೆ ದಿನಾಂಕ: 16.10.2023.

- - -

ಕರ್ನಾಟಕ ವಿಶ್ವವಿದ್ಯಾಲಯದ ಅಧೀನದಲ್ಲಿ ಒಳಪಡುವ ಮಾಧ್ಯಮಿಕ ಶಾಲೆಯಲ್ಲಿ ಖಾಲಿಯಿರುವ ಸಹಾಯಕ ಶಿಕ್ಷಕರು ಮತ್ತು ವಿಶೇಷ ಶಿಕ್ಷಕರ (ಸಂಗೀತ ಶಿಕ್ಷಕರು, ಸಹಾಯಕ ಹೌಸ್ ಮಾಸ್ಟರ್–ಕಂ–ಸಹಾಯಕ ಶಿಕ್ಷಕರು ಮತ್ತು ಸಹಾಯಕ ಹೌಸ್ ಮಾಸ್ಟರ್) ಹಾಗೂ ವಿಶ್ವವಿದ್ಯಾಲಯದ ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಖಾಲಿಯಿರುವ ಸಹಾಯಕ ಶಿಕ್ಷಕರು ಹುದ್ದೆಗಳನ್ನು ನೇರ–ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

## ಹುದ್ದೆಗಳ ವಿವರ ಕೆಳಗಿನಂತೆ ಇರುತ್ತದೆ.

**ಭಾಗ–ಅ (ಕ.ವಿ.ವಿ. ಮಾಧ್ಯಮಿಕ ಶಾಲೆ – 5 ರಿಂದ 12 ನೇ ತರಗತಿಯವರೆಗೆ)**

| ಅ.ನಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1. | ಸಹಾಯಕ ಶಿಕ್ಷಕರು | 09 |
| 2. | ಸಂಗೀತ ಶಿಕ್ಷಕ | 01 |
| 3. | ಸಹಾಯಕ ಹೌಸ್ ಮಾಸ್ಟರ್–ಕಂ–ಸಹಾಯಕ ಶಿಕ್ಷಕ | 01 |
| 4. | ಸಹಾಯಕ ಹೌಸ್ ಮಾಸ್ಟರ್ | 01 |

**ಭಾಗ–ಆ (ಕ.ವಿ.ವಿ. ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆ – 01 ರಿಂದ 05 ನೇ ತರಗತಿಯವರೆಗೆ)**

| ಅ.ನಂ | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1. | ಸಹಾಯಕ ಶಿಕ್ಷಕರು | 02 |

**ವಿಶೇಷ ಸೂಚನೆ** **ಮೇಲಿನ ಹುದ್ದೆಗಳ ಮೀಸಲಾತಿಯನ್ನು ಈ ಅಧಿಸೂಚನೆಯ ಪುಟ ಸಂಖ್ಯೆ 02 ರಲ್ಲಿ ಕಾಣಿಸಿದ ಕೋಷ್ಟಕದಲ್ಲಿ ಸ್ಪಷ್ಟವಾಗಿ ಕಾಣಿಸಿದೆ. ಅಭ್ಯರ್ಥಿಗಳು ಸದರಿ ಮೀಸಲಾತಿ ವಿಂಗಡನೆಯನ್ನು ಗಮನಿಸಿ ಅದರನುಸಾರ ಅರ್ಹರಾಗುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.**

ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು 4 ಪ್ರತಿಗಳಲ್ಲಿ ಅಗತ್ಯ ಲಗತ್ತುಗಳೊಂದಿಗೆ ಅರ್ಜಿಗಳನ್ನು ನೊಂದಾಯಿತ ಅಂಚೆಯ ಮೂಲಕ ಪೋಸ್ಟ್ **ಅಥವಾ** ನೇರವಾಗಿ ವಿಶ್ವವಿದ್ಯಾಲಯಕ್ಕೆ ಬಂದು ಆಡಳಿತ ಕಟ್ಟಡದಲ್ಲಿರುವ ನೆಲಮಹಡಿಯಲ್ಲಿರುವ ಅವಕ/ಜಾವಕ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿ ದಿನಾಂಕ: **18.11.2023** ರ ಸಾಯಂಕಾಲ **6.00** ಗಂಟೆಯ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದು. ನಿಗದಿತ ದಿನಾಂಕದ ನಂತರ ಸಲ್ಲಿಸಲಾಗುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ. ಪೋಸ್ಟ್ ಮುಖಾಂತರ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಗಳನ್ನು **ಕುಲಸಚಿವರು, ಸಿ.ಆ.ಸು.ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ–580 003** ಇವರಿಗೆ ದಿನಾಂಕ: **18.11.2023** ರಂದು ಕಚೇರಿ ವೇಳೆಯಲ್ಲಿ ತಲುಪುವಂತೆ ಸಲ್ಲಿಸುವುದು. ಪೋಸ್ಟ್ ಮುಖಾಂತರ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಅರ್ಜಿ ಇರಿಸಿದ ಲಕೋಟೆಯ ಮೇಲೆ ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ದಪ್ಪನೆಯ ಅಕ್ಷರಗಳಲ್ಲಿ ನಮೂದಿಸತಕ್ಕದ್ದು. (ಪೋಸ್ಟಲ್ ವಿಳಂಬಕ್ಕೆ ಕರ್ನಾಟಕ ವಿಶ್ವವಿದ್ಯಾಲಯ ಹೊಣೆಯಾಗಿರುವುದಿಲ್ಲ)

ಅರ್ಜಿ ಸಲ್ಲಿಸಲು ಆಸಕ್ತಿ ಹೊಂದಿರುವ ಅಭ್ಯರ್ಥಿಗಳು ಅರ್ಜಿ ನಮೂನೆಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲ www.kud.ac.in ನ ನೋಟಿಫಿಕೇಷನ್ ಸೆಗ್ಮೆಂಟ್‌ದಿಂದ ಡೌನಲೋಡ್ ಮಾಡಿಕೊಳ್ಳುವುದು. ಹೆಚ್ಚಿನ ಮಾಹಿತಿಯನ್ನು ದೂರವಾಣಿ ಸಂಖ್ಯೆ. **0836 2215349** ಕ್ಕೆ ಕಚೇರಿ ವೇಳೆಯಲ್ಲಿ ಕರೆ ಮಾಡಿ ಪಡೆದುಕೊಳ್ಳಬಹುದಾಗಿರುತ್ತದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದುಕೊಂಡ ಅರ್ಜಿ ಮೊತ್ತ ಹಾಗೂ ಸಂಸ್ಕರಣಾ ಶುಲ್ಕನೊಳಗೊಂಡು (Application Fee and Processing Fee) ಮೌಲ್ಯದ ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ.) ಅನ್ನು Finance Officer, K.U. Dharwad ಇವರ ಹೆಸರಿನಲ್ಲಿ ಪಡೆದುಕೊಂಡು ಸಲ್ಲಿಸಬೇಕು. ಅಥವಾ ವಿಶ್ವವಿದ್ಯಾಲಯದ ವೆಬ್‌ಸೈಟ್ www.kud.ac.in ಕ್ಕೆ ಹೋಗಿ Online Fee Payment ಅಂಕಣದಲ್ಲಿ ಮೊದಲನೇಯ ಭಾಗ Karnatak University Fee (State Bank of India) ಅನ್ನು ಕ್ಲಿಕಿಸಿ Educational Institutions ಅನ್ನು ಕ್ಲಿಕ್ ಮಾಡಿ ಅದರಲ್ಲಿ ಕರ್ನಾಟಕ ರಾಜ್ಯವನ್ನು ಆಯ್ಕೆ ಮಾಡಿ ಅದರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಅನ್ನು ಕ್ಲಿಕ್ ಮಾಡಿ 417 – Miscellaneous Receipt-General ಅನ್ನು ಆಯ್ಕೆ ಮಾಡಿ ಅದರಲ್ಲಿ ಅಭ್ಯರ್ಥಿಯ ಅಗತ್ಯ ವಿವರಗಳನ್ನು ನಮೂದಿಸಿದ ನಂತರ ಸದರ ವೇತನ ಪಾವತಿಯನ್ನು ಪೂರ್ಣಗೊಳಿಸಿ ಅದರ ಪ್ರತಿಯನ್ನು ಪ್ರಿಂಟ್ ಪಡೆದುಕೊಂಡು ಅರ್ಜಿಯೊಂದಿಗೆ ಸಲ್ಲಿಸುವುದು.

**ಅರ್ಜಿ ಮೊತ್ತ ಮತ್ತು ಸಂಸ್ಕಾರಣಾ ಶುಲ್ಕ ಕೆಳಗಿನಂತೆ ಇರುತ್ತದೆ.**

| ಅ.ನಂ. | ವರ್ಗ | ಮೊತ್ತ |
|---|---|---|
| 1 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 ಅಭ್ಯರ್ಥಿಗಳಿಗೆ ಮತ್ತು ಅಂಗವಿಕಲ ಅಭ್ಯರ್ಥಿಗಳಿಗೆ | 625/– |
| 2 | ಇತರೆ ಅಭ್ಯರ್ಥಿಗಳಿಗೆ | 1250/– |

## 1) ಮೀಸಲಾತಿ ವಿಂಗಡನೆಯ ಕೋಷ್ಟಕ

**(ಸರ್ಕಾರಿ ಆದೇಶ ನಂ. ಸಿಆಸುಇ 01 ಸೆಹಿಮ 2022 ದಿನಾಂಕ: 28.12.2022 ರ ನೂತನ ರೋಸ್ಟರ್ ಬಿಂದುಗಳ ಪ್ರಕಾರ ಲಂಬ ಮತ್ತು ಸರ್ಕಾರಿ ಆದೇಶ ಸಂಖ್ಯೆ. ಸಿಆಸುಇ 53 ಸೇನೆನಿ 2007 ದಿನಾಂಕ: 04.01.2008 ರ ಪ್ರಕಾರ ಸಮತಲ ಮೀಸಲಾತಿಯನ್ನು ಅಳವಡಿಸಿಕೊಳ್ಳಲಾಗಿದೆ)**

**ಅ) ಕ.ವಿ.ವಿ. ಮಾಧ್ಯಮಿಕ ಶಾಲೆ, ಧಾರವಾಡ (ಸಹಾಯಕ ಶಿಕ್ಷಕರು–09 ಹುದ್ದೆಗಳಿಗೆ ಮಾತ್ರ)**

| ಅ.ನಂ | ವಿಷಯ | ಹುದ್ದೆಗಳ ಸಂಖ್ಯೆ | ಮೀಸಲಾತಿ | ಮೀಸಲಾತಿಯ ವಂಗಡನೆ (ಲಂಬ ಮತ್ತು ಸಮತಲ ಸೇರಿ) | | | | | | | |
|---|---|---|---|---|---|---|---|---|---|---|---|
| | | | | ಮ | ಗ್ರಾ | ಕ.ಮಾ | ಯೋ.ನಿ | ಮಾ.ಸೈ | ವಿ.ಚೇ | ಇತರೆ | ಒಟ್ಟು |
| 1 | **ಆಂಗ್ಲ** | 01 | SC | -- | -- | -- | -- | -- | -- | 01 | 01 |
| 2 | **ಹಿಂದಿ** | 01 | GM | -- | -- | -- | -- | -- | -- | 01 | 01 |
| 3 | **ಕನ್ನಡ** | 01 | ST | -- | -- | -- | -- | -- | -- | 01 | 01 |
| 4 | **ಗಣಿತ (PCM)** | 02 | GM | 01 | -- | -- | -- | -- | -- | -- | 01 |
| | | | Cat-I | -- | -- | -- | -- | -- | -- | 01 | 01 |
| 5 | **ವಿಜ್ಞಾನ (CBZ)** | 02 | GM | -- | 01 | -- | -- | -- | -- | -- | 01 |
| | | | IIA | -- | -- | -- | -- | -- | -- | 01 | 01 |
| 6 | **ಸಮಾಜ ವಿಜ್ಞಾನ** | 02 | GM | -- | -- | -- | -- | -- | 01 | -- | 01 |
| | | | SC | 01 | -- | -- | -- | -- | -- | -- | 01 |
| | | | | **02** | **01** | **--** | **--** | **--** | **01** | **05** | **09** |
| **ಒಟ್ಟು ಹುದ್ದೆಗಳು – ೦೯** | | | | | | | | | | | |

## ಆ) ಕ.ವಿ.ವಿ. ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆ, ಧಾರವಾಡ

| ಅ.ನಂ | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ | ಮೀಸಲಾತಿ | ಮೀಸಲಾತಿಯ ವಂಗಡನೆ (ಲಂಬ ಮತ್ತು ಸಮತಲ ಸೇರಿ) | | | | | | | |
|---|---|---|---|---|---|---|---|---|---|---|---|
| | | | | ಮ | ಗ್ರಾ | ಕ.ಮಾ | ಯೋ.ನಿ | ಮಾ.ಸೈ | ವಿ. ಚೇ | ಇತರೆ | ಒಟ್ಟು |
| 1 | ಸಹಾಯಕ ಶಿಕ್ಷಕರು | 02 | SC | -- | -- | -- | -- | -- | -- | 01 | 01 |
| | | | GM | -- | -- | -- | -- | -- | -- | 01 | 01 |
| ಒಟ್ಟು ಹುದ್ದೆಗಳು - 02 | | | | | | | | | | | |

1) ಮ – ಮಹಿಳಾ ಅಭ್ಯರ್ಥಿ
2) ಗ್ರಾ – ಗ್ರಾಮೀಣ ಅಭ್ಯರ್ಥಿ
3) ಕ.ಮಾ – ಕನ್ನಡ ಮಾಧ್ಯಮದ ಅಭ್ಯರ್ಥಿ
4) ಯೋ.ನಿ – ಯೋಜನಾ ನಿರಾಶ್ರಿತ ಅಭ್ಯರ್ಥಿ
5) ಮಾ.ಸೈ – ಮಾಜಿ ಸೈನಿಕ ಅಭ್ಯರ್ಥಿ
6) ವಿ.ಚೇ – ವಿಶೇಷ ಚೇತನವುಳ್ಳ ಅಭ್ಯರ್ಥಿ

## ಇ) ವಿಶೇಷ ಶಿಕ್ಷಕರು

1) ಸಂಗೀತ ಶಿಕ್ಷಕರು – 01 ಹುದ್ದೆ (ಮೀಸಲು ರಹಿತ ಹುದ್ದೆ)
2) ಸಹಾಯಕ ಹೌಸ್ ಮಾಸ್ಟರ್-ಕಂ-ಸಹಾಯಕ ಶಿಕ್ಷಕರು – 01 ಹುದ್ದೆ (ಮೀಸಲು ರಹಿತ ಹುದ್ದೆ)
3) ಸಹಾಯಕ ಹೌಸ್ ಮಾಸ್ಟರ್ – 01 ಹುದ್ದೆ (ಮೀಸಲು ರಹಿತ ಹುದ್ದೆ)

ಈ ಮೇಲಿನ ವಿಶೇಷ ಶಿಕ್ಷಕರ ಹುದ್ದೆಗಳ ಮಂಜೂರಾದ ಸಂಖ್ಯೆ ತಲಾ ಒಂದು ಮಾತ್ರ ಇರುವುದರಿಂದ ಈ ವಿಶೇಷ ಶಿಕ್ಷಕರ ಹುದ್ದೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ. ಸಿಆಸುಇ 21 ಸೆಹಿಮ 90 ದಿನಾಂಕ: 16.11.1995 ರ ಪ್ರಕಾರ ಮೀಸಲಾತಿ ಅನ್ವಯವಾಗುವುದಿಲ್ಲ.

## 2) ಅರ್ಹತೆಗಳು

**ಅ) <u>ಸಹಾಯಕ ಶಿಕ್ಷಕರು (ಭಾಷೆಗಳು- ಆಂಗ್ಲ, ಕನ್ನಡ ಮತ್ತು ಹಿಂದಿ ತಲಾ 01 ಹುದ್ದೆ) – 03 ಹುದ್ದೆಗಳು</u>**

**ವೇತನ ಶ್ರೇಣಿ ರೂ. 33450-850-36000-950-39800-1100-46400-1250-53900-1450-62600**

### I) ಆಂಗ್ಲ (English) – 01 ಹುದ್ದೆ

1) ಅಂಗೀಕೃತ ವಿಶ್ವವಿದ್ಯಾಲಯದಿಂದ ಆಂಗ್ಲ (English) ವಿಷಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಸ್ನಾತಕ ಪದವಿಯಲ್ಲಿ ಮೂರು ವರ್ಷಗಳಲ್ಲಿ ಆಂಗ್ಲ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು
2) ಒಟ್ಟಾರೆ ಸ್ನಾತಕೋತ್ತರ ಹಾಗೂ ಸ್ನಾತಕ ಪದವಿಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪೈಕಿ ಪ್ರವರ್ಗ-1/ವಿಕಲಚೇತನರಿಗೆ ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆಯಲ್ಲಿ ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.
3) ಶಿಕ್ಷಣ ಪದವಿಯಲ್ಲಿ ಐಚ್ಛಿಕ ವಿಷಯಗಳ ಸಮೂಹದಲ್ಲಿ ಕಡ್ಡಾಯವಾಗಿ ಆಂಗ್ಲ ವಿಷಯದಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/ Method of Teaching) ಅಭ್ಯಾಸ ಮಾಡಿರಬೇಕು.
4) ಸಕ್ಷಮ ಪ್ರಾಧಿಕಾರವಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (KARTET) ಯಲ್ಲಿ ಉತ್ತೀರ್ಣವಾಗಿರಬೇಕು.
5) ಅಭ್ಯರ್ಥಿಯು ಪಾಠ ಮಾಡಲು ಉದ್ದೇಶಿಸಿರುವ ಭಾಷೆಯು ಅಭ್ಯರ್ಥಿಯ ಪದವಿಯಲ್ಲಿನ ಕಲಿಕಾ ಮಾಧ್ಯಮವಾಗಿರಬೇಕು.

## II) ಕನ್ನಡ (Kannada) – 01 ಹುದ್ದೆ

1) ಅಂಗೀಕೃತ ವಿಶ್ವವಿದ್ಯಾಲಯದಿಂದ ಕನ್ನಡ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಸ್ನಾತಕ ಪದವಿಯಲ್ಲಿ ಮೂರು ವರ್ಷಗಳಲ್ಲಿ ಕನ್ನಡ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು
2) ಒಟ್ಟಾರೆ ಸ್ನಾತಕೋತ್ತರ ಹಾಗೂ ಸ್ನಾತಕ ಪದವಿಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪೈಕಿ ಪ್ರವರ್ಗ–1/ವಿಕಲಚೇತನರಿಗೆ ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆಯಲ್ಲಿ ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.
3) ಶಿಕ್ಷಣ ಪದವಿಯಲ್ಲಿ ಐಚ್ಛಿಕ ವಿಷಯಗಳ ಸಮೂಹದಲ್ಲಿ ಕಡ್ಡಾಯವಾಗಿ ಕನ್ನಡ ವಿಷಯದಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/ Method of Teaching) ಅಭ್ಯಾಸ ಮಾಡಿರಬೇಕು.
4) ಸಕ್ಷಮ ಪ್ರಾಧಿಕಾರವಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (KARTET) ಯಲ್ಲಿ ಉತ್ತೀರ್ಣವಾಗಿರಬೇಕು.
5) (a) ಅಭ್ಯರ್ಥಿಯು ಪಾಠ ಮಾಡಲು ಉದ್ದೇಶಿಸಿರುವ ಭಾಷೆಯು ಅಭ್ಯರ್ಥಿಯ ಪದವಿಯಲ್ಲಿನ ಕಲಿಕಾ ಮಾಧ್ಯಮವಾಗಿರಬೇಕು.

   (b) ಒಂದು ವೇಳೆ ಅಭ್ಯರ್ಥಿಯ ಪದವಿಯಲ್ಲಿ ಕಲಿತ ಮಾಧ್ಯಮ ಮತ್ತು ಪಾಠ ಮಾಡಲು ಉದ್ದೇಶಿಸಿದ ಮಾಧ್ಯಮ ಒಂದೇ ಆಗಿರದಿದ್ದಲ್ಲಿ;

   i) ಉದ್ದೇಶಿಸಿದ ಬೋಧನಾ ಭಾಷೆಯನ್ನು ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಯಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಸಿಸಿರಬೇಕು.

   ಅಥವಾ

   ii) ಎಸ್.ಎಸ್.ಎಲ್.ಸಿ ಅಥವಾ ಪದವಿ ಶಿಕ್ಷಣ ಸಂದರ್ಭದಲ್ಲಿ ಆಯಾ ಮಾಧ್ಯಮದಲ್ಲಿ ಕಲಿತಿರಬೇಕು.

   ಅಥವಾ

   iii) ಯು.ಜಿ.ಸಿ.ಯಿಂದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರುವ ಆಯಾ ಭಾಷೆಯ ಡಿಪ್ಲೋಮಾ

   ಅಥವಾ

   iv) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಜರುಗಿಸಲ್ಪಡುವ ಕನ್ನಡ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣ ಅಥವಾ ಕನ್ನಡ ಸಾಹಿತ್ಯ ಪರಿಷತನಿಂದ ಜರುಗಿಸಲ್ಪಡುವ ಕನ್ನಡ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು.

## III) ಹಿಂದಿ (Hindi) – 01 ಹುದ್ದೆ

1) ಅಂಗೀಕೃತ ವಿಶ್ವವಿದ್ಯಾಲಯದಿಂದ ಹಿಂದಿ ಸ್ನಾತಕೋತ್ತರ ಪದವಿ ಹಾಗೂ ಸ್ನಾತಕ ಪದವಿಯಲ್ಲಿ ಮೂರು ವರ್ಷಗಳಲ್ಲಿ ಹಿಂದಿ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು
2) ಒಟ್ಟಾರೆ ಸ್ನಾತಕೋತ್ತರ ಹಾಗೂ ಸ್ನಾತಕ ಪದವಿಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪೈಕಿ ಪ್ರವರ್ಗ–1/ವಿಕಲಚೇತನರಿಗೆ ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆಯಲ್ಲಿ ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.
3) ಅಂಗೀಕೃತ ವಿಶ್ವವಿದ್ಯಾಲಯದಿಂದ ಶಿಕ್ಷಣ ಪದವಿ (ಬಿ.ಎಡ್) ಯನ್ನು ಪಡೆದಿರಬೇಕು ಹಾಗೂ ಅದರಲ್ಲಿ ಹಿಂದಿ ಭಾಷಾಯಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು ಅಭ್ಯಸಿಸರಬೇಕು.
4) ಶಿಕ್ಷಣ ಪದವಿಯಲ್ಲಿ ಐಚ್ಛಿಕ ವಿಷಯಗಳ ಸಮೂಹದಲ್ಲಿ ಕಡ್ಡಾಯವಾಗಿ ಹಿಂದಿ ವಿಷಯದಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/ Method of Teaching) ಅಭ್ಯಾಸ ಮಾಡಿರಬೇಕು.
5) ಸಕ್ಷಮ ಪ್ರಾಧಿಕಾರವಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (KARTET) ಯಲ್ಲಿ ಉತ್ತೀರ್ಣವಾಗಿರಬೇಕು.
6) (a) ಅಭ್ಯರ್ಥಿಯು ಪಾಠ ಮಾಡಲು ಉದ್ದೇಶಿಸಿರುವ ಭಾಷೆಯು ಅಭ್ಯರ್ಥಿಯ ಪದವಿಯಲ್ಲಿನ ಕಲಿಕಾ ಮಾಧ್ಯಮವಾಗಿರಬೇಕು.

   (b) ಒಂದು ವೇಳೆ ಅಭ್ಯರ್ಥಿಯ ಪದವಿಯಲ್ಲಿ ಕಲಿತ ಮಾಧ್ಯಮ ಮತ್ತು ಪಾಠ ಮಾಡಲು ಉದ್ದೇಶಿಸಿದ ಮಾಧ್ಯಮ ಒಂದೇ ಆಗಿರದಿದ್ದಲ್ಲಿ;

   i) ಉದ್ದೇಶಿಸಿದ ಬೋಧನಾ ಭಾಷೆಯನ್ನು ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಯಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಸಿಸಿರಬೇಕು.

ಅಥವಾ

ii) ಎಸ್.ಎಸ್.ಎಲ್.ಸಿ ಅಥವಾ ಪದವಿ ಶಿಕ್ಷಣ ಸಂದರ್ಭದಲ್ಲಿ ಆಯಾ ಮಾಧ್ಯಮದಲ್ಲಿ ಕಲಿತಿರಬೇಕು.

ಅಥವಾ

iii) ಯು.ಜಿ.ಸಿ.ಯಿಂದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರುವ ಆಯಾ ಭಾಷೆಯ ಡಿಪ್ಲೋಮಾ

ಅಥವಾ

iv) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಜರುಗಿಸಲ್ಪಡುವ ಹಿಂಧಿ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣ ಅಥವಾ ತತ್ಸಮಾನ ಪ್ರಾಧಿಕಾರದಿಂದ ಜರುಗಿಸಲ್ಪಡುವ ಹಿಂದಿ ವಿಷಯದ ಕೋರ್ಸ್‌ನಲ್ಲಿ ಉತ್ತೀರ್ಣವಾಗಿರಬೇಕು.

## IV) ಸಹಾಯಕ ಶಿಕ್ಷಕರು (ಗಣಿತ ಮತ್ತು ಭೌತಿಕ ವಿಜ್ಞಾನ) – 02 ಹುದ್ದೆಗಳು

**ವೇತನ ಶ್ರೇಣಿ ರೂ. 33450–850–36000–950–39800–1100–46400–1250–53900–1450–62600**

1) ಅಂಗೀಕೃತ ವಿಶ್ವವಿದ್ಯಾಲಯದಿಂದ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಸ್ನಾತಕ ಪದವಿಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ (PCM) ಅಥವಾ ಭೌತಶಾಸ್ತ್ರ, ಗಣಿತ, ಗಣಕಯಂತ್ರ ವಿಜ್ಞಾನ (PMCS) ಅಥವಾ ಭೌತಶಾಸ್ತ್ರ, ಗಣಿತ, ಇಲೆಕ್ಟ್ರಾನಿಕ್ಸ್ (PME) ಮೂರು ವರ್ಷಗಳಲ್ಲಿ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಅಧ್ಯಯನ ಮಾಡಿರಬೇಕು. ಯಾವುದೇ ಸಂದರ್ಭದಲ್ಲಿ ಗಣಿತವನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಸಿಸಿರಬೇಕು.
2) ಒಟ್ಟಾರೆ ಸ್ನಾತಕೋತ್ತರ ಹಾಗೂ ಸ್ನಾತಕ ಪದವಿಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪೈಕಿ ಪ್ರವರ್ಗ–1/ವಿಕಲಚೇತನರಿಗೆ ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆಯಲ್ಲಿ ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.
3) ಅಂಗೀಕೃತ ವಿಶ್ವವಿದ್ಯಾಲಯದಿಂದ ಶಿಕ್ಷಣ ಪದವಿ (ಬಿ.ಎಡ್) ಯನ್ನು ಪಡೆದಿರಬೇಕು.
4) ಶಿಕ್ಷಣ ಪದವಿಯಲ್ಲಿ ಭೌತಿಕ ವಿಜ್ಞಾನಗಳ ಸಮೂಹದ ವಿಷಯಗಳಲ್ಲಿ ಕನಿಷ್ಠ ಪಕ್ಷ ಒಂದು ವಿಷಯದಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/ Method of Teaching) ಅಭ್ಯಾಸ ಮಾಡಿರಬೇಕು.
5) ಸಕ್ಷಮ ಪ್ರಾಧಿಕಾರವಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (KARTET) ಯಲ್ಲಿ ಉತ್ತೀರ್ಣವಾಗಿರಬೇಕು.
6) (a) ಅಭ್ಯರ್ಥಿಯು ಪಾಠ ಮಾಡಲು ಉದ್ದೇಶಿಸಿರುವ ಭಾಷೆಯು ಅಭ್ಯರ್ಥಿಯ ಪದವಿಯಲ್ಲಿನ ಕಲಿಕಾ ಮಾಧ್ಯಮವಾಗಿರಬೇಕು.

(b) ಒಂದು ವೇಳೆ ಅಭ್ಯರ್ಥಿಯ ಪದವಿಯಲ್ಲಿ ಕಲಿತ ಮಾಧ್ಯಮ ಮತ್ತು ಪಾಠ ಮಾಡಲು ಉದ್ದೇಶಿಸಿದ ಮಾಧ್ಯಮ ಒಂದೇ ಆಗಿರದಿದ್ದಲ್ಲಿ;

i) ಉದ್ದೇಶಿಸಿದ ಬೋಧನಾ ಭಾಷೆಯನ್ನು ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಯಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಸಿಸಿರಬೇಕು.

ಅಥವಾ

ii) ಎಸ್.ಎಸ್.ಎಲ್.ಸಿ ಅಥವಾ ಪದವಿ ಶಿಕ್ಷಣ ಸಂದರ್ಭದಲ್ಲಿ ಆಯಾ ಮಾಧ್ಯಮದಲ್ಲಿ ಕಲಿತಿರಬೇಕು.

ಅಥವಾ

iii) ಯು.ಜಿ.ಸಿ.ಯಿಂದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರುವ ಆಯಾ ಭಾಷೆಯ ಡಿಪ್ಲೋಮಾ

ಅಥವಾ

iv) ಕರ್ನಾಟಕ ಶಾಲಾ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಜರುಗಿಸಲ್ಪಡುವ ಕನ್ನಡ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣ ಅಥವಾ ಕನ್ನಡ ಸಾಹಿತ್ಯ ಪರಿಷತನಿಂದ ಜರುಗಿಸಲ್ಪಡುವ ಕನ್ನಡ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು.

## V) ಸಹಾಯಕ ಶಿಕ್ಷಕರು (ಜೀವವಿಜ್ಞಾನ) – 02 ಹುದ್ದೆಗಳು

**ವೇತನ ಶ್ರೇಣಿ ರೂ. 33450–850–36000–950–39800–1100–46400–1250–53900–1450–62600**

1) ಅಂಗೀಕೃತ ವಿಶ್ವವಿದ್ಯಾಲಯದಿಂದ ವಿಜ್ಞಾನ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಸ್ನಾತಕ ಪದವಿಯಲ್ಲಿ ರಸಾಯನಶಾಸ್ತ್ರ ವಿಷಯವನ್ನು ಕಡ್ಡಾಯ ವಿಷಯವಾಗಿ ಮತ್ತು ಸಸ್ಯಶಾಸ್ತ್ರ ಅಥವಾ ಪ್ರಾಣಿಶಾಸ್ತ್ರ ವಿಷಯಗಳ ಪೈಕಿ ಯಾವುದಾದರೊಂದನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಸಸಿರಬೇಕು.
2) ಒಟ್ಟಾರೆ ಸ್ನಾತಕೋತ್ತರ ಹಾಗೂ ಸ್ನಾತಕ ಪದವಿಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪೈಕಿ ಪ್ರವರ್ಗ–1/ವಿಕಲಚೇತನರಿಗೆ ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆಯಲ್ಲಿ ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.
3) ಅಂಗೀಕೃತ ವಿಶ್ವವಿದ್ಯಾಲಯದಿಂದ ಶಿಕ್ಷಣ ಪದವಿ (ಬಿ.ಎಡ್) ಯನ್ನು ಪಡೆದಿರಬೇಕು.
4) ಶಿಕ್ಷಣ ಪದವಿಯಲ್ಲಿ ಜೀವವಿಜ್ಞಾನಗಳ ಸಮೂಹದ ವಿಷಯಗಳಲ್ಲಿ ಕನಿಷ್ಠ ಪಕ್ಷ ಒಂದು ವಿಷಯದಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/Method of Teaching) ಅಭ್ಯಾಸ ಮಾಡಿರಬೇಕು.
5) ಸಕ್ಷಮ ಪ್ರಾಧಿಕಾರವಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (KARTET) ಯಲ್ಲಿ ಉತ್ತೀರ್ಣವಾಗಿರಬೇಕು.
6) (a) ಅಭ್ಯರ್ಥಿಯು ಪಾಠ ಮಾಡಲು ಉದ್ದೇಶಿಸಿರುವ ಭಾಷೆಯು ಅಭ್ಯರ್ಥಿಯ ಪದವಿಯಲ್ಲಿನ ಕಲಿಕಾ ಮಾಧ್ಯಮವಾಗಿರಬೇಕು.

   (b) ಒಂದು ವೇಳೆ ಅಭ್ಯರ್ಥಿಯ ಪದವಿಯಲ್ಲಿ ಕಲಿತ ಮಾಧ್ಯಮ ಮತ್ತು ಪಾಠ ಮಾಡಲು ಉದ್ದೇಶಿಸಿದ ಮಾಧ್ಯಮ ಒಂದೇ ಆಗಿರದಿದ್ದಲ್ಲಿ;

   i) ಉದ್ದೇಶಿಸಿದ ಬೋಧನಾ ಭಾಷೆಯನ್ನು ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಯಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಸಸಿರಬೇಕು.

   ಅಥವಾ

   ii) ಎಸ್.ಎಸ್.ಎಲ್.ಸಿ ಅಥವಾ ಪದವಿ ಶಿಕ್ಷಣ ಸಂದರ್ಭದಲ್ಲಿ ಆಯಾ ಮಾಧ್ಯಮದಲ್ಲಿ ಕಲಿತಿರಬೇಕು.

   ಅಥವಾ

   iii) ಯು.ಜಿ.ಸಿ.ಯಿಂದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರುವ ಆಯಾ ಭಾಷೆಯ ಡಿಪ್ಲೋಮಾ

   ಅಥವಾ

   iv) ಕರ್ನಾಟಕ ಶಾಲಾ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಜರುಗಿಸಲ್ಪಡುವ ಕನ್ನಡ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣ ಅಥವಾ ಕನ್ನಡ ಸಾಹಿತ್ಯ ಪರಿಷತನಿಂದ ಜರುಗಿಸಲ್ಪಡುವ ಕನ್ನಡ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು.

## VI) ಸಹಾಯಕ ಶಿಕ್ಷಕರು (ಸಮಾಜ ವಿಜ್ಞಾನ) – 02 ಹುದ್ದೆಗಳು

**ವೇತನ ಶ್ರೇಣಿ ರೂ. 33450–850–36000–950–39800–1100–46400–1250–53900–1450–62600**

1) ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರುವ ಸ್ನಾತಕೋತ್ತರ ಪದವಿ ಹಾಗೂ ಸ್ನಾತಕ ಪದವಿಯಲ್ಲಿ ಸಮಾಜ ಶಾಸ್ತ್ರ ಸಮೂಹದ ಇತಿಹಾಸ/ಅರ್ಥಶಾಸ್ತ್ರ/ಭೂಗೋಳ ಶಾಸ್ತ್ರ/ ರಾಜ್ಯಶಾಸ್ತ್ರ/ಸಮಾಜಶಾಸ್ತ್ರ ಇವುಗಳ ಪೈಕಿ ಯಾವುದಾದರೂ ಎರಡು ವಿಷಯಗಳನ್ನು ಐಚ್ಛಿಕವಾಗಿ ಅಭ್ಯಸಸಿರಬೇಕು.
2) ಒಟ್ಟಾರೆ ಸ್ನಾತಕೋತ್ತರ ಹಾಗೂ ಸ್ನಾತಕ ಪದವಿಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪೈಕಿ ಪ್ರವರ್ಗ–1/ವಿಕಲಚೇತನರಿಗೆ ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆಯಲ್ಲಿ ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.
3) ಅಂಗೀಕೃತ ವಿಶ್ವವಿದ್ಯಾಲಯದಿಂದ ಶಿಕ್ಷಣ ಪದವಿ (ಬಿ.ಎಡ್) ಯನ್ನು ಪಡೆದಿರಬೇಕು.
4) ಶಿಕ್ಷಣ ಪದವಿಯಲ್ಲಿ ಸಮಾಜ ವಿಜ್ಞಾನಗಳ ಸಮೂಹದ ವಿಷಯಗಳಲ್ಲಿ ಕನಿಷ್ಠ ಪಕ್ಷ ಒಂದು ವಿಷಯದಲ್ಲಿ ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/ Method of Teaching) ಅಭ್ಯಾಸ ಮಾಡಿರಬೇಕು.
5) ಸಕ್ಷಮ ಪ್ರಾಧಿಕಾರವಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (KARTET) ಯಲ್ಲಿ ಉತ್ತೀರ್ಣವಾಗಿರಬೇಕು.

6) (a) ಅಭ್ಯರ್ಥಿಯು ಪಾಠ ಮಾಡಲು ಉದ್ದೇಶಿಸಿರುವ ಭಾಷೆಯು ಅಭ್ಯರ್ಥಿಯ ಪದವಿಯಲ್ಲಿನ ಕಲಿಕಾ ಮಾಧ್ಯಮವಾಗಿರಬೇಕು.

(b) ಒಂದು ವೇಳೆ ಅಭ್ಯರ್ಥಿಯ ಪದವಿಯಲ್ಲಿ ಕಲಿತ ಮಾಧ್ಯಮ ಮತ್ತು ಪಾಠ ಮಾಡಲು ಉದ್ದೇಶಿಸಿದ ಮಾಧ್ಯಮ ಒಂದೇ ಆಗಿರದಿದ್ದಲ್ಲಿ;

i) ಉದ್ದೇಶಿಸಿದ ಬೋಧನಾ ಭಾಷೆಯನ್ನು ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಯಲ್ಲಿ ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಸಿಸಿರಬೇಕು.

ಅಥವಾ

ii) ಎಸ್.ಎಸ್.ಎಲ್.ಸಿ ಅಥವಾ ಪದವಿ ಶಿಕ್ಷಣ ಸಂದರ್ಭದಲ್ಲಿ ಆಯಾ ಮಾಧ್ಯಮದಲ್ಲಿ ಕಲಿತಿರಬೇಕು.

ಅಥವಾ

iii) ಯು.ಜಿ.ಸಿ.ಯಿಂದ ಅಂಗೀಕೃತ ವಿಶ್ವವಿದ್ಯಾಲಯದಿಂದ ಪಡೆದಿರುವ ಆಯಾ ಭಾಷೆಯ ಡಿಪ್ಲೋಮಾ

ಅಥವಾ

iv) ಕರ್ನಾಟಕ ಶಾಲಾ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಜರುಗಿಸಲ್ಪಡುವ ಕನ್ನಡ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣ ಅಥವಾ ಕನ್ನಡ ಸಾಹಿತ್ಯ ಪರಿಷತನಿಂದ ಜರುಗಿಸಲ್ಪಡುವ ಕನ್ನಡ ಭಾಷಾ ಕೋರ್ಸ್‌ನಲ್ಲಿ ಉತ್ತೀರ್ಣರಾಗಿರಬೇಕು.

## VII) ಕರ್ನಾಟಕ ವಿಶ್ವವಿದ್ಯಾಲಯದ ಮಾಧ್ಯಮಿಕ ಶಾಲೆಯ ವಿಶೇಷ ಶಿಕ್ಷಕರು

(ಸಂಗೀತ ಶಿಕ್ಷಕ, ಸಹಾಯಕ ಹೌಸ್ ಮಾಸ್ಟರ್–ಕಂ–ಸಹಾಯಕ ಶಿಕ್ಷಕರು ಮತ್ತು ಸಹಾಯಕ ಹೌಸ್ ಮಾಸ್ಟರ್– ತಲಾ 01 ಹುದ್ದೆ)

1. **ಸಂಗೀತ ಶಿಕ್ಷಕರು – 01 ಹುದ್ದೆ**

ವೇತನ ಶ್ರೇಣಿ: 27650–650–29600–750–32600–850–36000–950–39800–1100–46400–1250–52650

ಅಂಗೀಕೃತ ವಿಶ್ವವಿದ್ಯಾಲಯದಿಂದ ಸಂಗೀತದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.

2. **ಸಹಾಯಕ ಹೌಸ್ ಮಾಸ್ಟರ್–ಕಂ–ಸಹಾಯಕ ಶಿಕ್ಷಕರು – 01 ಹುದ್ದೆ**

ವೇತನ ಶ್ರೇಣಿ: 33450–850–36000–950–39800–1100–46400–1250–53900–1450–62600

i) ಅಂಗೀಕೃತ ವಿಶ್ವವಿದ್ಯಾಲಯದಿಂದ ಕಲಾ ನಿಕಾಯದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಡೆದಿರುವ ಸ್ನಾತಕ ಪದವಿಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪೈಕಿ ಪ್ರವರ್ಗ–1/ವಿಕಲಚೇತನರಿಗೆ ನಿಗದಿಪಡಿಸಿರುವ ತತ್ಸಮಾನ ವಿದ್ಯಾರ್ಹತೆಯಲ್ಲಿ ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.

ii) ಅಂಗೀಕೃತ ವಿಶ್ವವಿದ್ಯಾಲಯದಿಂದ ಶಿಕ್ಷಣ ಪದವಿ (ಬಿ.ಎಡ್) ಪಡೆದಿರಬೇಕು.

3. **ಸಹಾಯಕ ಹೌಸ್ ಮಾಸ್ಟರ್ – 01 ಹುದ್ದೆ**

ವೇತನ ಶ್ರೇಣಿ: 30350–750–32600–850–36000–950–39800–1100–46400–1250–53900–1450–58250

i) ಅಂಗೀಕೃತ ವಿಶ್ವವಿದ್ಯಾಲಯದಿಂದ ವಿಜ್ಞಾನ ವಿಷಯದಲ್ಲಿ ಪಡೆದಿರುವ ಸ್ನಾತಕ ಪದವಿಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು.

ii) ಅಂಗೀಕೃತ ವಿಶ್ವವಿದ್ಯಾಲಯದಿಂದ ಶಿಕ್ಷಣ ಪದವಿ (ಬಿ.ಎಡ್) ಪಡೆದಿರಬೇಕು.

ಈ ಮೇಲಿನ ವಿಶೇಷ ಶಿಕ್ಷಕರ ಹುದ್ದೆಗಳ ಮಂಜೂರಾದ ಸಂಖ್ಯೆ ತಲಾ ಒಂದು ಮಾತ್ರ ಇರುವುದರಿಂದ ಈ ವಿಶೇಷ ಶಿಕ್ಷಕರ ಹುದ್ದೆಗಳಿಗೆ ಸರ್ಕಾರಿ ಆದೇಶ ಸಂಖ್ಯೆ. ಸಿಆಸುಇ 21 ಸೇಹಿಮ 90 ದಿನಾಂಕ: 16.11.1995 ರ ಪ್ರಕಾರ ಮೀಸಲಾತಿ ಅನ್ವಯವಾಗುವುದಿಲ್ಲ.

VIII) **ಕ.ವಿ.ವಿ. ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆ (01 ರಿಂದ 05 ನೇ ತರಗತಿಯವರೆಗೆ)**

**ಸಹಾಯಕ ಶಿಕ್ಷಕರು (ಆಂಗ್ಲ ಮತ್ತು ಕನ್ನಡ ಭಾಷೆಗಳು ತಲಾ ಒಂದು ಹುದ್ದೆ) : ಒಟ್ಟು 02 ಹುದ್ದೆಗಳು**

**ವೇತನ ಶ್ರೇಣಿ ರೂ. 25800–600–27000–650–29600–750–32600–850–36000–950–39800–1100–46400–1250–51400**

i) ಪಿ.ಯು.ಸಿ ಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು ಮತ್ತು ಎರಡು ವರ್ಷಗಳ Diploma in Elementary Education ರಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಆಂಗ್ಲ ಅಥವಾ ಕನ್ನಡ ಭಾಷೆಯನ್ನು ಬೋಧಿಸಲು ಉದ್ದೇಶಿಸುವ ಅಭ್ಯರ್ಥಿಗಳು ಪಿ.ಯು.ಸಿ ಯಲ್ಲಿ ಆಯಾ ವಿಷಯಗಳಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು

ಅಥವಾ

ಪಿ.ಯು.ಸಿ ಯಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಹೊಂದಿರಬೇಕು ಮತ್ತು ನಾಲ್ಕು ವರ್ಷಗಳ Bachelor in Elementary Education ಉತ್ತೀರ್ಣರಾಗಿರಬೇಕು.

ಅಥವಾ

ಪಿ.ಯು.ಸಿ ಯಲ್ಲಿ ಕನಿಷ್ಠ ಶೇ. 50 ರಷ್ಟು ಹೊಂದಿರಬೇಕು ಮತ್ತು ಎರಡು ವರ್ಷಗಳ Diploma in Education (Special Education) ಉತ್ತೀರ್ಣರಾಗಿರಬೇಕು.

ಪರಂತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಇತರೆ ಹಿಂದುಳಿದ ವರ್ಗಗಳ ಪೈಕಿ ಪ್ರವರ್ಗ–1 ಮತ್ತು ವಿಶೇಷ ಚೇತನವುಳ್ಳ ಅಭ್ಯರ್ಥಿಗಳು ಕನಿಷ್ಠ ಶೇ. 45 ರಷ್ಟು ಅಂಕಗಳನ್ನು ಪಡೆದಿರಬೇಕು.

ii) ಸಕ್ಷಮ ಪ್ರಾಧಿಕಾರವಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆದಿರುವ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ (KARTET) ಯಲ್ಲಿ ಉತ್ತೀರ್ಣವಾಗಿರಬೇಕು.

ಅಥವಾ

ಡಿಪ್ಲೋಮಾ ಅಥವಾ ಸ್ನಾತಕ ಪದವಿಯಲ್ಲಿ (Teachers Education) ಬೋಧನಾ ಅಭ್ಯಾಸ/ಬೋಧನಾ ವಿಧಾನವನ್ನು (Practice Teaching/ Method of Teaching) ಅಭ್ಯಾಸ ಮಾಡಿರಬೇಕು

## 3. ಅಭ್ಯರ್ಥಿಗಳ ವಯೋಮಿತಿ

| | | |
|---|---|---|
| 1 | ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗಾಗಿ | 42 ವರ್ಷಗಳು |
| 2 | 2A, 2B, 3A, 3B ವರ್ಗದ ಅಭ್ಯರ್ಥಿಗಳಿಗಾಗಿ | 45 ವರ್ಷಗಳು |
| 3 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ–1 ಮತ್ತು ವಿಶೇಷ ಚೇತನವುಳ್ಳ ಅಭ್ಯರ್ಥಿಗಳಿಗಾಗಿ | 47 ವರ್ಷಗಳು |

# 4. ಆಯ್ಕೆ ಪಟ್ಟಿ ತಯಾರಿಸುವ ವಿಧಾನ:

ಆಯ್ಕೆ ಪಟ್ಟಿಯ ಪ್ರಕ್ರಿಯೆಯು ನಾಲ್ಕು ಹಂತಗಳನ್ನು ಒಳಗೊಂಡಿರುತ್ತದೆ.

## ಮೊದಲ ಹಂತ

1) ಅಭ್ಯರ್ಥಿಗಳು ಸಲ್ಲಿಸಿದ ಶೈಕ್ಷಣಿಕ ದಾಖಲಾತಿಗಳು ಹಾಗೂ ಸೇವಾ ನಿರತ ಅಥವಾ ವಿಶೇಷ ಕರ್ತವ್ಯಗಳಲ್ಲಿ ಪಾಲ್ಗೊಂಡಂತಹ ಅಭ್ಯರ್ಥಿಗಳಿಗೆ ಪ್ರತಿ ವರ್ಷ ಸೇವೆಗೆ ಶೇಕಡ 2% ಸೇವಾ ಕೃಪಾಂಕ ಸೇರಿಸಿ ಮೆರಿಟ್ ಆಧಾರದ ಮೇಲೆ ಮೀಸಲಾತಿ ಅನುಗುಣವಾಗಿ ಅರ್ಹ ಮತ್ತು ಅನರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುವುದು.
2) ಮೇಲಿನ ಪಟ್ಟಿಗೆ ಆಕ್ಷೇಪಣೆಗಳನ್ನು ಅಹ್ವಾನಿಸಲಾಗುತ್ತದೆ.

**ವಿಶೇಷ ಸೂಚನೆ:** ಆಕ್ಷೇಪಣೆಯನ್ನು ಸಲ್ಲಿಸುವ ಅಭ್ಯರ್ಥಿಗಳು ಪ್ರತಿಯೊಂದು ಆಕ್ಷೇಪಣೆಗೆ ತಲಾ ರೂ. 50/– ಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.kud.ac.in ಕ್ಕೆ ಹೋಗಿ Online Fee Payment ಅಂಕಣದಲ್ಲಿ ಮೊದಲನೇಯ ಭಾಗ Karnatak University Fee (State Bank of India) ಅನ್ನು ಕ್ಲಿಕಿಸಿ Educational Institutions ಅನ್ನು ಕ್ಲಿಕ್ ಮಾಡಿ ಅದರಲ್ಲಿ ಕರ್ನಾಟಕ ರಾಜ್ಯವನ್ನು ಆಯ್ಕೆ ಮಾಡಿ ಅದರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಅನ್ನು ಕ್ಲಿಕ್ ಮಾಡಿ 417 – Miscellaneous Receipt-General ಅನ್ನು ಆಯ್ಕೆ ಮಾಡಿ ಅದರಲ್ಲಿ ಅಭ್ಯರ್ಥಿಯ ಅಗತ್ಯ ವಿವರಗಳನ್ನು ನಮೂದಿಸಿ ಹಣ ಸಂದಾಯ ಮಾಡಬೇಕು.

ಒಂದು ವೇಳೆ ಅಭ್ಯರ್ಥಿಯ ಆಕ್ಷೇಪಣೆ ಸಮರ್ಪಕವಾಗಿದ್ದಲ್ಲಿ ಆತನು/ಅವಳು ಸಂದಾಯ ಮಾಡಿದ ರೂ. 50/– ಮೊತ್ತವನ್ನು ಹಿಂದಿರುಗಿಸಲಾಗುವುದು. ಒಂದು ವೇಳೆ ಆಕ್ಷೇಪಣೆ ಅಸಮರ್ಪಕವಾಗಿದ್ದಲ್ಲಿ ಈ ರೂ. 50/– ರ ಮೊತ್ತವನ್ನು ವಿಶ್ವವಿದ್ಯಾಲಯ ಮುಟ್ಟುಗೋಲು ಹಾಕಿ ವಿಶ್ವವಿದ್ಯಾಲಯದ ಸಾಮಾನ್ಯ ಖಾತೆಗೆ ಜಮೆ ತೆಗೆದುಕೊಳ್ಳಲಾಗುವುದು.

## ಎರಡನೇ ಹಂತ

1) ಆಕ್ಷೇಪಣೆಗಳನ್ನು ಸ್ವೀಕರಿಸಿದ ನಂತರ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗೊಳಪಡಿಸಿದ ನಂತರ ಮೆರಿಟ್ ಆಧಾರದ ಮೀಸಲಾತಿ ಅನುಗುಣವಾಗಿ ಮುಂದಿನ ಹಂತಕ್ಕೆ ಅರ್ಹರಾಗುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುವುದು.
2) ಪಟ್ಟಿಯಲ್ಲಿ ಉಳಿಯುವ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ಜರುಗಿಸಲಾಗುವುದು.

## ಮೂರನೇಯ ಹಂತ

1) ಅರ್ಹತಾ ಪರೀಕ್ಷೆಯಲ್ಲಿ ಹಾಗೂ ಲಿಖಿತ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳನ್ನು ಒಟ್ಟುಗೂಡಿಸಿ 01:05 ಅನುಪಾತದಂತೆ ಯಾದಿ ತಯಾರಿಸಿ 50 ಅಂಕಗಳ ಬ್ಲ್ಯಾಕ್–ಬೋರ್ಡ್ ಪರಿಣಿತಿ ಪರೀಕ್ಷೆಯನ್ನು ನಡೆಸಲಾಗುವುದು.
2) ಅರ್ಹತಾ ಪರೀಕ್ಷೆ ಹಾಗೂ ಲಿಖಿತ ಪರೀಕ್ಷೆ ಹಾಗೂ ಬ್ಲ್ಯಾಕ್–ಬೋರ್ಡ್ ಪರಿಣಿತಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಒಟ್ಟುಗೂಡಿಸಿ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. ಅದರಲ್ಲಿ ಮುಖ್ಯ ಸ್ಥಾನ ಹಾಗೂ ಕಾಯ್ದಿರಿಸಿದ ಸ್ಥಾನಗಳನ್ನು 1:2 ಅನುಪಾತದಲ್ಲಿ ಸಿದ್ದಪಡಿಸಲಾಗುವುದು.
3) ಮೊದಲನೇಯ ಅಭ್ಯರ್ಥಿ ಯಾವುದೇ ಕಾರಣಕ್ಕೆ ಮೂರು ಬಾರಿ ಕಾಲಾವಕಾಶ ನೀಡಿದರೂ ಸೇವೆಗೆ ಹಾಜರಾಗದಿದ್ದಲ್ಲಿ ಅಥವಾ ಯಾವುದೇ ಇನ್ನಿತರ ಕಾರಣಗಳಿಗಾಗಿ ನೇಮಕಾತಿ ಹೊಂದದಿದ್ದಲ್ಲಿ ಕಾಯ್ದಿರಿಸಿದ ಸ್ಥಾನದಲ್ಲಿನ ಅಭ್ಯರ್ಥಿಯನ್ನು ನೇಮಕಾತಿಗಾಗಿ ಪರಿಗಣಿಸಲಾಗುವುದು.

4) ಒಂದು ವೇಳೆ ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ಅಭ್ಯರ್ಥಿಗಳು ಸಮನಾಗಿ ಅಂಕಗಳನ್ನು ಪಡೆದುಕೊಂಡಿದ್ದರೆ, ಆಗ ಅಂತಹ ಅಭ್ಯರ್ಥಿಗಳ ವಯಸ್ಸಿನ ಆಧಾರದ ಮೇಲೆ ಅಂತಹ ಅಭ್ಯರ್ಥಿಗಳನ್ನು ಮೆರಿಟ್ ಯಾದಿಯಲ್ಲಿ ಇರಿಸಲಾಗುವುದು. (ಹಿರಿಯನಾದವನು ಕಿರಿಯ ವಯಸ್ಸಿನವನಿಗಿಂತ ಮೇಲಿನ ಮೆರಿಟ್ ಸ್ಥಾನ ಪಡೆಯುವನು).

5) ಸಿದ್ಧಪಡಿಸಿದ ಯಾದಿಯಲ್ಲಿ ಹೆಸರು ಇದೆ ಎಂಬ ಕಾರಣಕ್ಕೆ ನೇಮಕಾತಿ ಆಗುವುದು ಎಂದು ಅಥವಾ ಆಗಿದೆ ಎಂದು ಅಥವಾ ನೇಮಕಾತಿ ತನ್ನ ಹಕ್ಕು ಎಂದು ಯಾವುದೇ ರೀತಿಯಲ್ಲಿ ಹಕ್ಕನ್ನು ಸ್ಥಾಪಿಸುವಂತಿಲ್ಲ.

## 5. ಲಿಖಿತ ಪರೀಕ್ಷೆಗಳು

**ONE PAPER WILL BE OF MULTIPLE CHOICE PAPER TO BE FILLED IN OMR SHEET**

## ಪೇಪರ್–1

**(Objective Type)**

| ಅ.ನಂ | ವಿಷಯ | ಅಂಕಗಳು |
|---|---|---|
| 1 | ಸಾಮಾನ್ಯ ಕನ್ನಡ ಭಾಷೆ | 25 |
| 2 | ಸಾಮಾನ್ಯ ಆಂಗ್ಲ ಭಾಷೆ | 25 |
| 3 | ಸಾಮಾನ್ಯ ಜ್ಞಾನ ಮತ್ತ ಪ್ರಚಲಿತ ವಿದ್ಯಮಾನಗಳು | 25 |
| 4 | ಶೈಕ್ಷಣಿಕ ಮನೋವಿಜ್ಞಾನ ಮತ್ತು ವಿಕಸನ+ ಬೋಧನಾ ವಿಧಾನ | 50 |
| 5 | ಮೌಲ್ಯಶಿಕ್ಷಣ ಮತ್ತು ಆರೋಗ್ಯ ಶಿಕ್ಷಣ | 15 |
| 6 | ಗಣಕಯಂತರ ಪ್ರಬುದ್ಧತೆ ಬಗ್ಗೆ | 10 |
| | ಒಟ್ಟು | 150 |

## ಪೇಪರ್-II

| ಅ.ನಂ | ವಿಷಯ | ಅಂಕಗಳು |
|---|---|---|
| 1 | ಆಯಾ ವಿಷಯದ ಜ್ಞಾನ – ಬಹು ಆಯ್ಕೆಯ ಪ್ರಶ್ನೆಗಳು **(Objective Type)** | 50 |
| 2 | ಆಯಾ ವಿಷಯದ ಜ್ಞಾನ – ವಿವರಣಾತ್ಮಕ ಪ್ರಶ್ನೆಗಳು **(Descriptive Type)** | 100 |

**Minimum qualifying marks will be 45%.**

## ಪೇಪರ್-III

ವಿವರಣಾತ್ಮಕ

(ಗಣಿತ ಮತ್ತು ವಿಜ್ಞಾನ ಹಾಗೂ ಸಮಾಜ ವಿಜ್ಞಾನ ಶಿಕ್ಷಕರಿಗೆ ಮಾತ್ರ)

| ಅ.ನಂ | ವಿಷಯ | ಅಂಕಗಳು |
|---|---|---|
| 1 | ಆಯಾ ಬೋಧನಾ ಮಾಧ್ಯಮದ ಭಾಷಾ ಸಾಮರ್ಥ್ಯ ಅಭ್ಯರ್ಥಿಗಳು ನಿರ್ದಿಷ್ಟಪಡಿಸಿದ ಬೋಧನಾ ಮಾಧ್ಯಮದಲ್ಲಿ ಬೋಧಿಸಲು ಹೊಂದಿರುವ ಭಾಷಾ ಬಳಕೆಯ ಸಾಮರ್ಥ್ಯ, ಗ್ರಹಿಸುವಿಕೆ, ಶಬ್ದಭಂಡಾರ ಮತ್ತು ಬರವಣಿಗೆ ಸಾಮರ್ಥ್ಯಗಳನ್ನು ಪರೀಕ್ಷಿಸಲಾಗುವುದು. | 100 |

ಪೇಪರ್–III ಅನ್ನು ಅಭ್ಯರ್ಥಿಗಳು ತಾವು ಇಚ್ಛಿಸುವ ಭಾಷೆಯಲ್ಲಿ ತೆಗೆದುಕೊಳ್ಳಬಹುದು. ಹಾಗೂ ಸದರಿ ಪೇಪರ್–III ತೇರ್ಗಡೆಗೆ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು.

## ಲಿಖಿತ ಪರೀಕ್ಷೆಗಳ ಅವಧಿ

| ಅ.ನಂ | ವಿಷಯ | ಅವಧಿ | ಗರಿಷ್ಠ ಅಂಕಗಳು |
|---|---|---|---|
| 1 | Paper I (Objective Type) | **02.30 hours** | **150** |
| 2 | Paper II (Objective Type) | **01.00 hours** | **50** |
| 3 | Paper II (Descriptive Type) (for English, Mathematics &Science, Biological Sciences, Social Sciences subjects ) | **02.00 hours** | **100** |
| 4 | Paper III (Descriptive Type) | **02.00 hours** | **100** |

ವಿಶೇಷ ಸೂಚನೆ: ಯಾವುದೇ ಸಂದರ್ಭದಲ್ಲಿಯೂ ಅಭ್ಯರ್ಥಿಗಳು ಲಿಖಿತ ಪರೀಕ್ಷೆಗಳಲ್ಲಿ ಪಡೆದುಕೊಂಡ ಅಂಕಗಳನ್ನು ಮರು ಎಣಿಕೆ ಮಾಡಲು ಅಥವಾ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ.

## 6. ಲಿಖಿತ ಪರೀಕ್ಷೆಯ ಪಠ್ಯಕ್ರಮ (ಸಹಾಯಕ ಶಿಕ್ಷಕರ ಹುದ್ದೆಗಳಿಗೆ ಮಾತ್ರ ಲಿಖಿತ ಪರೀಕ್ಷೆ ಇರುತ್ತದೆ)

ಕರ್ನಾಟಕ ವಿಶ್ವವಿದ್ಯಾಲಯದ ಮಾಧ್ಯಮಿಕ ಶಾಲೆಯಲ್ಲಿನ (೦5 ರಿಂದ 12 ನೇ ತರಗತಿಯವರೆಗೆ) ಸಹಾಯಕ ಶಿಕ್ಷಕರ ಹುದ್ದೆಗಳಿಗೆ ಈ ಮೇಲಿನ ಲಿಖಿತ ಪರೀಕ್ಷೆಗಳ ಪೈಕಿ ಪ್ರಚಲಿತ ವಿದ್ಯಮಾನಗಳು ಹಾಗೂ ಸಾಮಾನ್ಯ ಜ್ಞಾನ ವಿಷಯಗಳನ್ನು ಹೊರತುಪಡಿಸಿ ನಿರ್ದಿಷ್ಟ ವಿಷಯಗಳ ಪಠ್ಯ ೦5 ರಿಂದ 1೦ ನೇ ತರಗತಿಯ ಪಠ್ಯಪುಸ್ತಕದಲ್ಲಿನ ಪಠ್ಯಕ್ರಮದ ಅನುಸಾರವಾಗಿರುತ್ತದೆ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆಯಲ್ಲಿನ (೦1 ರಿಂದ ೦5 ನೇ ತರಗತಿಯವರೆಗೆ) ಸಹಾಯಕ ಶಿಕ್ಷಕರ ಹುದ್ದೆಗಳಿಗೆ ಈ ಮೇಲಿನ ಲಿಖಿತ ಪರೀಕ್ಷೆಗಳ ಪೈಕಿ ಪ್ರಚಲಿತ ವಿದ್ಯಮಾನಗಳು ಹಾಗೂ ಸಾಮಾನ್ಯ ಜ್ಞಾನ ವಿಷಯಗಳನ್ನು ಹೊರತುಪಡಿಸಿ ನಿರ್ದಿಷ್ಟ ವಿಷಯಗಳ ಪಠ್ಯ ೦1 ರಿಂದ ೦5 ನೇ ತರಗತಿಯ ಪಠ್ಯಪುಸ್ತಕದಲ್ಲಿನ ಪಠ್ಯಕ್ರಮದ ಅನುಸಾರವಾಗಿರುತ್ತದೆ.

**ಇನ್ನುಳಿದಂತೆ, ವಿಶೇಷ ಶಿಕ್ಷಕರ ಹುದ್ದೆಗಳು ಅಂದರೆ, ಸಂಗೀತ ಶಿಕ್ಷಕರು, ಸಹಾಯಕ ಹೌಸ್ ಮಾಸ್ಟರ್–ಕಂ–ಸಹಾಯಕ ಶಿಕ್ಷಕ ಮತ್ತು ಸಹಾಯಕ ಹೌಸ್ ಮಾಸ್ಟರ್ ಈ ಮೂರು ಹುದ್ದೆಗಳಿಗೆ ಯಾವುದೇ ಲಿಖಿತ ಪರೀಕ್ಷೆ ಇರುವುದಿಲ್ಲ.**

### ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆ, ಉತ್ತರ ಪತ್ರಿಕೆ, ಕೀ–ಉತ್ತರಗಳು ಮತ್ತು ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶ

ಲಿಖಿತ ಪರೀಕ್ಷೆಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ಸಿದ್ಧಪಡಿಸಲು ಒಂದು ತಜ್ಞರ ಸಮಿತಿಯನ್ನು ರಚಿಸಲಾಗುವುದು. ಸದರಿ ಕಾರ್ಯ ಅತ್ಯಂತ ಗೌಪ್ಯವಾಗಿ ಇರುವುದು. ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಸಿದ್ಧಪಡಿಸಲಾದ ಪ್ರಶ್ನೆ ಪತ್ರಿಕೆಯಲ್ಲಿನ ಯಾವುದೇ ಒಂದು ಅಥವಾ ಹೆಚ್ಚಿನ ಪ್ರಶ್ನೆಗಳು ಲೋಪದಿಂದ ಕೂಡಿದ್ದರೆ ಅಂತಹ ಪ್ರಶ್ನೆಗಳಿಗೆ ಅನ್ವಯವಾಗುವ ಅಂಕಗಳನ್ನು ಯಾವೊಬ್ಬ ಅಭ್ಯರ್ಥಿಗೂ ಪರಿಗಣಿಸಲಾಗುವುದಿಲ್ಲ. ಪ್ರಶ್ನೆ ಪತ್ರಿಕೆಗಳನ್ನು ಪರೀಕ್ಷೆ ಪ್ರಾರಂಭವಾಗುವ ಹದಿನೈದು ನಿಮಿಷಗಳ ಮೊದಲು ಮುಚ್ಚಿದ ಲಕೋಟೆಯಲ್ಲಿ ಪರೀಕ್ಷಾ ಕೇಂದ್ರಕ್ಕೆ ತರಲಾಗುವುದು ಹಾಗೂ ಪರೀಕ್ಷೆ ಪ್ರಾರಂಭವಾಗುವ ಐದು ನಿಮಿಷಗಳ ಮೊದಲು ಪರೀಕ್ಷಾ ಕೊಠಡಿಯಲ್ಲಿ ಅಭ್ಯರ್ಥಿಗಳ ಸಮ್ಮುಖದಲ್ಲಿ ಸ್ವೇಚ್ಛೆವಾಗಿ ಕೆಲ ಅಭ್ಯರ್ಥಿಗಳ ಹಸ್ತಾಕ್ಷರ ಪಡೆದು ತೆರೆಯಲಾಗುವುದು.

ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರದಲ್ಲಿ ವಿತರಿಸಲಾಗುವುದು ಹಾಗೂ ಯಾವುದೇ ಕಾರಣಕ್ಕೂ ಉತ್ತರ ಪತ್ರಿಕೆಗಳನ್ನು ಪರೀಕ್ಷಾ ಕೇಂದ್ರದಿಂದ ಹೊರಗೆ ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ.

**ಲಿಖಿತ ಪರೀಕ್ಷೆಯನ್ನು ನಡೆಸುವ ದಿನಾಂಕ ಮತ್ತು ಸ್ಥಳ**

ಮೇಲೆ ವಿವರಿಸಿದಂತೆ ಲಿಖಿತ ಪರೀಕ್ಷೆಯ ದಿನಾಂಕಗಳನ್ನು ಮತ್ತು ಪರೀಕ್ಷೆ ನಡೆಸುವ ಸ್ಥಳಗಳನ್ನು ಅರ್ಹ ಅಭ್ಯರ್ಥಿಗಳಿಗೆ ಪತ್ರದ ಮುಖೇನ ತಿಳಿಸಲಾಗುವುದು ಹಾಗೂ ವಿವರಗಳನ್ನು ವಿಶ್ವವಿದ್ಯಾಲಯದ ಅಂತರ್ಜಾಲ ವಿಳಾಸ www.kud.ac.in ರಲ್ಲಿ ಪ್ರಚುರಪಡಿಸಲಾಗುವುದು. ಮತ್ತು ಈ ಕುರಿತು ಪತ್ರಿಕಾ ಪ್ರಕಟಣೆಯನ್ನು ನೀಡಲಾಗುವುದು.

## 7. ಮೆರಿಟ್ ನಿರ್ಧರಿಸುವ ವಿಧಾನ

ಕರ್ನಾಟಕ ವಿಶ್ವವಿದ್ಯಾಲಯದ ಮಾಧ್ಯಮಿಕ ಶಾಲೆಯಲ್ಲಿನ (05 ರಿಂದ 12 ನೇ ತರಗತಿಯವರೆಗೆ) ಸಹಾಯಕ ಶಿಕ್ಷಕರು ಹಾಗೂ ಸಹಾಯಕ ಹೌಸ್ ಮಾಸ್ಟರ್–ಕಂ–ಸಹಾಯಕ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಯಾದಿಯನ್ನು ಈ ಕೆಳಗಿನ ವಿಧಾನದಲ್ಲಿ ಮೆರಿಟ್ ಅನುಸಾರ ಕ್ರಮಾಂಕದಲ್ಲಿ ಇರಿಸಲಾಗುವುದು.

### (1) ಸಹಾಯಕ ಶಿಕ್ಷಕರು

| | | |
|---|---|---|
| 1 | ಸ್ನಾತಕ ಶಿಕ್ಷಣ ಪದವಿಯಲ್ಲಿ ಪಡೆದ ಅಂಕಗಳು | 25 |
| 2 | ಸ್ನಾತಕ ಪದವಿಯಲ್ಲಿ ಪಡೆದ ಅಂಕಗಳು | 25 |
| 3 | ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳು | 50 |
| 4 | ಬ್ಲ್ಯಾಕ್–ಬೋರ್ಡ್ ಪರಿಣಿತಿ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳು | 50 |
| | **ಒಟ್ಟು ಅಂಕಗಳು** | **150** |

### (2) ಸಂಗೀತ ಶಿಕ್ಷಕರು

| | | |
|---|---|---|
| 1 | ಸ್ನಾತಕ ಪದವಿಯಲ್ಲಿ ಪಡೆದ ಅಂಕಗಳು | 50 |
| 2 | ಸ್ನಾತಕೋತ್ತರ ಪದವಿಯಲ್ಲಿ ಪಡೆದ ಅಂಕಗಳು | 50 |
| 3 | ಸಂಗೀತ ವಿಷಯಕ್ಕೆ ಸಂಬಂಧಿಸಿ ಬ್ಲ್ಯಾಕ್–ಬೋರ್ಡ್ ಪರಿಣಿತಿ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳು | 50 |
| | **ಒಟ್ಟು ಅಂಕಗಳು** | **150** |

### (3) ಸಹಾಯಕ ಹೌಸ್ ಮಾಸ್ಟರ್–ಕಂ–ಸಹಾಯಕ ಶಿಕ್ಷಕರ

| | | |
|---|---|---|
| 1 | ಸ್ನಾತಕ ಪದವಿಯಲ್ಲಿ ಪಡೆದ ಅಂಕಗಳು | 50 |
| 2 | ಸ್ನಾತಕ ಶಿಕ್ಷಣ ಪದವಿಯಲ್ಲಿ ಪಡೆದ ಅಂಕಗಳು | 50 |
| 3 | ಬ್ಲ್ಯಾಕ್–ಬೋರ್ಡ್ ಪರಿಣಿತಿ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳು | 50 |
| | **ಒಟ್ಟು ಅಂಕಗಳು** | **150** |

### (4) ಸಹಾಯಕ ಹೌಸ್ ಮಾಸ್ಟರ್

| | | |
|---|---|---|
| 1 | ಸ್ನಾತಕ ಪದವಿಯಲ್ಲಿ ಪಡೆದ ಅಂಕಗಳು | 50 |
| 2 | ಸ್ನಾತಕ ಶಿಕ್ಷಣ ಪದವಿಯಲ್ಲಿ ಪಡೆದ ಅಂಕಗಳು | 50 |
| 3 | ಬ್ಲ್ಯಾಕ್–ಬೋರ್ಡ್ ಪರಿಣಿತಿ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳು | 50 |
| | **ಒಟ್ಟು ಅಂಕಗಳು** | **150** |

ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಯೋಗಿಕ ಪ್ರಾಥಮಿಕ ಶಾಲೆಯಲ್ಲಿನ (01 ರಿಂದ 05 ನೇ ತರಗತಿಯವರೆಗೆ) ಸಹಾಯಕ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಯಾದಿಯನ್ನು ಈ ಕೆಳಗಿನ ವಿಧಾನದಲ್ಲಿ ಮೆರಿಟ್ ಅನುಸಾರ ಕ್ರಮಾಂಕದಲ್ಲಿ ಇರಿಸಲಾಗುವುದು.

| | | |
|---|---|---|
| 1 | ಪಿ.ಯು.ಸಿ. ದ್ವಿತೀಯ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳು | 25 |
| 2 | ಡಿ.ಎಡ್ ಪರೀಕ್ಷೆಯಲ್ಲಿ ತೆಗೆದುಕೊಂಡ ಅಂಕಗಳು | 25 |
| 3 | ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳು | 35 |
| 4 | ಟಿ.ಇ.ಟಿ. ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳು | 15 |
| 5 | ಬ್ಲ್ಯಾಕ್-ಬೋರ್ಡ್ ಪರಿಣಿತಿ ಪರೀಕ್ಷೆಯಲ್ಲಿ ಪಡೆದುಕೊಂಡ ಅಂಕಗಳು | 50 |
| | **ಒಟ್ಟು ಅಂಕಗಳು** | **150** |

## 8. ಸೇವಾನಿರತ ಅಥವಾ ವಿಶೇಷ ಕರ್ತವ್ಯಗಳಲ್ಲಿ ಪಾಲ್ಗೊಂಡಂತಹ ಅಭ್ಯರ್ಥಿಗಳಿಗೆ ಪ್ರಾತಿನಿಧ್ಯತೆ

ಭಾರತ ಸರ್ಕಾರದ ಜನಗಣತಿ ಸಮೀಕ್ಷಾ ಕಾರ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ/ನಿರ್ವಹಿಸುತ್ತಿದ್ದ ಅಥವಾ ವಿಶ್ವವಿದ್ಯಾಲಯದ ಅಧೀನದ ಮಾಧ್ಯಮಿಕ ಅಥವಾ ಪ್ರಾಯೋಗಿಕ ಪ್ರಾಥಮಿಕ ಕನ್ನಡ ಶಾಲೆಯಲ್ಲಿ ಕಾರ್ಯನಿರ್ವಹಿಸಿದ/ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಶಿಕ್ಷಕರೆಂದು ಅಥವಾ ಅತಿಥಿ ಬೋಧನಾ ಸಹಾಯಕರು ಅಥವಾ ಅತಿಥಿ ಸಹಾಯಕರೆಂದು ಅಥವಾ ಸಹಾಯಕ ಹೌಸ್ ಮಾಸ್ಟರ್-ಕಂ-ಸಹಾಯಕ ಶಿಕ್ಷಕರ ಅಥವಾ ಸಹಾಯಕ ಹೌಸ್ ಮಾಸ್ಟರ್ ಅಥವಾ ಗೌರವ ಶಿಕ್ಷಕರೆಂದು ಸೇವೆ ಸಲ್ಲಿಸಿದ ಪೂರ್ಣಗೊಂಡ ಪ್ರತಿ ವರ್ಷಕ್ಕೆ ಶೇ. 2 ರಷ್ಟು ಸೇವಾ ಕೃಪಾಂಕ ನೀಡಿ ಮೆರಿಟ್ ಯಾದಿಯನ್ನು ಸಿದ್ಧಪಡಿಸಲಾಗುವುದು. ಸಹಾಯಕ ಹೌಸ್ ಮಾಸ್ಟರ್-ಕಂ-ಸಹಾಯಕ ಶಿಕ್ಷಕರ ಅಥವಾ ಸಹಾಯಕ ಹೌಸ್ ಮಾಸ್ಟರ್ ಎಂದು ಕಾರ್ಯನಿರ್ವಹಿಸಿದವರಿಗೆ ಆಯಾ ಹುದ್ದೆಗಳ ನೇಮಕಾತಿಯಲ್ಲಿ ಆಧ್ಯತೆಯನ್ನು ನೀಡಲಾಗುವುದು.

ಅಭ್ಯರ್ಥಿಗಳು ಈ ಕುರಿತು ಅರ್ಜಿಯಲ್ಲಿ ಸ್ಪಷ್ಟವಾಗಿ ನಮೂದಿಸುವುದಲ್ಲದೇ ಅದಕ್ಕೆ ಪೂರಕವಾಗಿ ಅಧಿಕೃತ ದಾಖಲೆಗಳನ್ನು ಸಲ್ಲಿಸತಕ್ಕದ್ದು.

## 9. ಅರ್ಜಿ ನಮೂನೆಗಳು

ಅಭ್ಯರ್ಥಿಗಳು ಆಯಾ ವಿಷಯದ ಹುದ್ದೆಗಳಿಗೆ ನಿಗದಿಪಡಿಸಿದ ಮೀಸಲಾತಿಯನ್ನು ಗಮನಿಸಿ ಅದರನುಸಾರ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ನಿಗದಿಪಡಿಸಿದ ನಮೂನೆಯಲ್ಲಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

| ಅ.ನಂ | ಪ್ರಮಾಣ ಪತ್ರ | ನಮೂನೆ |
|---|---|---|
| 1 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ | ಡಿ |
| 2 | ಪ್ರವರ್ಗ-1 ರ ಅಭ್ಯರ್ಥಿಗಳು | ಇ |
| 3 | ಹಿಂದುಳಿದ ವರ್ಗಗಳ ಅಭ್ಯರ್ಥಿಗಳು (2ಎ, 2ಬಿ, 3ಎ, 3ಬಿ) | ಎಫ್ |
| 4 | ವಿಶೇಷ ಚೇತನವುಳ್ಳ ಅಭ್ಯರ್ಥಿಗಳು | ಸರ್ಕಾರಿ ಜಿಲ್ಲಾ ಆಸ್ಪತ್ರೆಯಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ |
| 5 | ಗ್ರಾಮೀಣ ಅಭ್ಯರ್ಥಿಗಳು | ಆಯಾ ಇಲಾಖೆ ನಿಗದಿಪಡಿಸಿದ ಮಾದರಿಯಲ್ಲಿ |
| 6 | ಸೇವಾ ನಿರತ ಅಭ್ಯರ್ಥಿಗಳ ಪ್ರಮಾಣ ಪತ್ರ | ಅಭ್ಯರ್ಥಿ ಕೆಲಸ ಮಾಡುವ ಶಾಲೆ/ಇಲಾಖೆ/ಸಂಸ್ಥೆಯು ನೀಡುವ ಸೇವಾ ಪ್ರಮಾಣ ಪತ್ರ |

## 10. ಅರ್ಜಿ ಸಲ್ಲಿಕೆ:

1) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಖುದ್ದಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾದಲ್ಲಿ ತಮ್ಮ ಅರ್ಜಿಗಳ ಮೇಲೆ ಸ್ಪಷ್ಟವಾಗಿ ಗೋಚರಿಸುವಂತೆ ದಪ್ಪ ಅಕ್ಷರಗಳಲ್ಲಿ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತಿದೆಯೋ ಆ ಹುದ್ದೆಯನ್ನು ಬರೆದು ಆಡಳಿತ ವಿಭಾಗದ ನೆಲಮಹಡಿಯಲ್ಲಿರುವ ಅವಕ/ಜಾವಕ ವಿಭಾಗದಲ್ಲಿ ನಿಗದಿತ ಕಾಲಮಿತಿಯಲ್ಲಿ ಹಾಗೂ ಕಚೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು,
2) ಒಂದು ವೇಳೆ ಅಭ್ಯರ್ಥಿಗಳು ಪೋಸ್ಟ್ ಮುಖಾಂತರ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ತಮ್ಮ ಅರ್ಜಿಗಳಿರುವ ಲಕೋಟೆಯ ಮೇಲೆ ದಪ್ಪ ಅಕ್ಷರಗಳಲ್ಲಿ ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತಿದೆಯೋ ಆ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ಬರೆದು **"ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ – 580 003"** ಇವರ ಹೆಸರಿನಲ್ಲಿ ನಿಗದಿಪಡಿಸಿದ ದಿನಾಂಕದೊಳಗಾಗಿ ಸಲ್ಲಿಸುವುದು,
3) ಅರ್ಜಿ ಮೊತ್ತ ಮತ್ತು ಸಂಸ್ಕರಣಾ ವೆಚ್ಚಗಳನ್ನು (Application Fee and Processing Fee) ಡಿಮ್ಯಾಂಡ್ ಡ್ರಾಫ್ಟ್ ಅಥವಾ ಆನ್‌ಲೈನ್ ಮೂಲಕ ಅರ್ಜಿ ಮೊತ್ತ ಮತ್ತು ಸಂಸ್ಕರಣಾ ಶುಲ್ಕ ಸಂದಾಯ ಮಾಡಿದ ಬಗ್ಗೆ ರಸೀದಿ ಪ್ರತಿ. ಡಿಮ್ಯಾಂಡ್ ಡ್ರಾಫ್ಟ್‌ಅನ್ನು **"ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ"** ಇವರ ಹೆಸರಿನಲ್ಲಿ ತೆಗೆಸಿರಬೇಕು.
4) ಜನ್ಮ ದಿನಾಂಕ ಪರಿಶೀಲನೆಗಾಗಿ ಜನನ ಪ್ರಮಾಣ ಪತ್ರ **ಅಥವಾ** ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರದ ಪ್ರತಿ.
5) ನಡತೆ ಪ್ರಮಾಣ ಪತ್ರಗಳ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.
6) ಇತ್ತೀಚಿಗೆ ತೆಗೆಸಿಕೊಂಡಿರುವ ಅಭ್ಯರ್ಥಿಯ ಪಾಸಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಗೆ ಲಗತ್ತಿಸಿರಬೇಕು.
7) 28 X 12 ಸೆಂ.ಮಿ. ಅಳತೆಯ ಸ್ವ–ವಿಳಾಸವುಳ್ಳ ಮತ್ತು ಅದಕ್ಕೆ ರೂ.40/– ರ ಅಂಚೆ ಚೀಟಿ ಅಂಟಿಸಿದ ಲಕೋಟೆ.

## 11. ದುರ್ನಡತೆಗಳು

ಅಭ್ಯರ್ಥಿಯು ಈ ನೇಮಕಾತಿ ಸಂಬಂಧವಾಗಿ ತೋರುವ ಯಾವುದೇ ರೀತಿಯ ದುರ್ನಡೆತೆಯನ್ನು ಗಂಭೀರವಾಗಿ ಪರಿಗಣಿಸಿ ಅಂತಹ ದುರ್ನಡೆತೆಯನ್ನು ತೋರುವ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು. ಸಾಮಾನ್ಯವಾಗಿ ಈ ಕೆಳಗಿನವುಗಳನ್ನು ದುರ್ನಡತೆ ಎಂದು ಪರಿಗಣಿಸಲಾಗುವುದು.

1) ***ಈ ನೇಮಕಾತಿಯು ಸಂಪೂರ್ಣವಾಗಿ ಪಾರದರ್ಶಕತೆಯಿಂದ ಕೂಡಿದ್ದು, ಅಭ್ಯರ್ಥಿಗಳು ಯಾವುದೇ ರೀತಿಯ ಆಮಿಷಗಳಿಗೆ ಒಳಗಾಗಿ ಯಾವುದೇ ಮಧ್ಯವರ್ತಿಗಳಿಂದ ಪ್ರಭಾವಿತರಾಗಿ ಲಂಚ ನೀಡುವುದು ಅಥವಾ ಬೇರೆ ಅಭ್ಯರ್ಥಿಗಳಿಂದ ಹಣ ಸಂಗ್ರಹಿಸುವುದು ಅಥವಾ ಲಂಚತನವನ್ನು ಉತ್ತೇಜಿಸುವುದು ಕಾನೂನಿನ ರೀತಿಯಲ್ಲಿ ಅಪರಾಧವಾಗಿರುತ್ತದೆ. ಒಂದು ವೇಳೆ ಯಾವುದೇ ಅಭ್ಯರ್ಥಿ ಅಥವಾ ಯಾವುದೇ ವ್ಯಕ್ತಿ ಈ ಕೃತ್ಯದಲ್ಲಿ ಬಾಗಿಯಾಗಿರುವುದು ಕಂಡುಬಂದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲಾಗುವುದು.***
2) ***ಒಂದು ವೇಳೆ ಅಭ್ಯರ್ಥಿಗಳಿಗೆ ಈ ವಿಷಯವಾಗಿ ಮಧ್ಯವರ್ತಿಗಳು ಸಂಪರ್ಕಿಸಿ ಆಮಿಷ ಒಡ್ಡಿದ್ದಲ್ಲಿ ಅಂತಹ ಅಭ್ಯರ್ಥಿಗಳು ಕೂಡಲೇ ಈ ಬಗ್ಗೆ ತಮ್ಮ ದೂರನ್ನು ಸಮರ್ಥನೆಯೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ಅಥವಾ ವಿಭಾಗದ ಇ–ಮೇಲ್ ವಿಳಾಸ kudparcomplaint@gmail.com ಕ್ಕೆ ಕಳುಹಿಸಲು ತಿಳಿಸಲಾಗಿದೆ. ದೂರುದಾರರ ಹೆಸರು ಮತ್ತು ಇತರೆ ಮಾಹಿತಿಯನ್ನು ಗೌಪ್ಯವಾಗಿಡಲಾಗುವುದು.***
3) ನೇಮಕಾತಿಗಾಗಿ ನೇರವಾಗಿ ಅಥವಾ ಪರೋಕ್ಷವಾಗಿ ಒತ್ತಡ ಹೇರುವ ಅಥವಾ ಅನ್ಯ ಮಾರ್ಗದಿಂದ ಪ್ರಯತ್ನ ಪಡುವ ಅರ್ಭ್ಯಾಥಿಗಳನ್ನು ನೇಮಕಾತಿಯಿಂದ ಅನರ್ಹಗೊಳಿಸಲಾಗುವುದು.
4) ಪರೀಕ್ಷಾ ಕೇಂದ್ರಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಬ್ಲೂಟೂಥ ಉಪಕರಣಗಳನ್ನು (Ear Phones, Smart Watch, Calculator etc) ಅಥವಾ ಇನ್ನಿತರೆ ಯಾವುದೇ ಆಧುನಿಕ ಉಪಕರಣಗಳನ್ನು ತರುವುದು ಅಥವಾ ಪರೀಕ್ಷಾ ಕೇಂದ್ರದಲ್ಲಿ ಬಳುಸುವುದು, ಪುಸ್ತಕಗಳನ್ನು ತರುವುದು ಅಥವಾ ಬಳಸುವುದು, ನಕಲು ಚೀಟಿಗಳನ್ನು ಹೊಂದುವುದು ಅಥವಾ ಬಳಸುವುದು, ಅನ್ಯ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ನಕಲು ಮಾಡುವುದು, ಬೇರೊಬ್ಬ ಅಭ್ಯರ್ಥಿಯಿಂದ ಪರೀಕ್ಷೆ ಬರೆಸಲು ಪ್ರಯತ್ನಿಸುವುದು (ದೃಷ್ಟಿ ಅಂಗವಿಕಲತೆಯಿಂದ ಸ್ವಂತ ಪರೀಕ್ಷೆ ಬರೆಯಲು ಸಾಧ್ಯವಾಗದಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ), ಅಥವಾ ಈ ರೀತಿಯ ಬೇರೆ ವಿಧದ ವರ್ತನೆಗಳನ್ನು ಸಂಪೂರ್ಣವಾಗಿ ನಿಷೇದಿಸಲಾಗಿದೆ.
5) ಪರೀಕ್ಷಾ ಕೇಂದ್ರದಲ್ಲಿ ಇತರೆ ಅಭ್ಯರ್ಥಿಗಳಿಗೆ ಅಡಚಣೆ ಉಂಟು ಮಾಡುವುದು, ಪರೀಕ್ಷಾ ಕೇಂದ್ರದ ಮೇಲ್ವಿಚಾರಕರೊಂದಿಗೆ ಅಥವಾ ಅಲ್ಲಿನ ಸಿಬ್ಬಂದಿಗಳೊಂದಿಗೆ ವಾಗ್ವಾದ ಮಾಡುವುದು, ಇತ್ಯಾದಿ.
6) ಅಭ್ಯರ್ಥಿಗಳು ತಮ್ಮ ಅರ್ಜಿಗಳಲ್ಲಿ ಯಾವುದೇ ರೀತಿಯ ಅಡ್ಡಚಿಹ್ನೆಗಳನ್ನು ಅಥವಾ ಅರ್ಜಿಯಲ್ಲಿ ಪ್ರತ್ಯೇಕವಾಗಿ ಗುರುತಿಸುವಂತಹ ಯಾವುದೇ ಚಿಹ್ನೆಗಳನ್ನು ಉಪಯೋಗಿಸತಕ್ಕದಲ್ಲ. ಹೀಗೆ ಕಂಡು ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

## 12. ಆಯ್ಕೆಗೊಳ್ಳುವ ಅಭ್ಯರ್ಥಿಗಳು ನೂತನ ಪಿಂಚಣಿ ಯೋಜನೆಯಲ್ಲಿ ಒಳಪಡುವರು

ಈಗಾಗಲೇ ಸರ್ಕಾರಿ ಸೇವೆಯಲ್ಲಿರುವ ಮತ್ತು ಹಳೆಯ ಪಿಂಚಣಿ ಯೋಜನೆಯಲ್ಲಿ ಒಳಪಡುವ ಸರ್ಕಾರಿ ನೌಕರ/ಳು ಸೇರಿ ಈ ಅಧಿಸೂಚನೆಯಲ್ಲಿ ಕಾಣಿಸಿದ ಯಾವುದೇ ಹುದ್ದೆಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದು ಅಯ್ಕೆಯಾಗಿ ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಹೊಂದಿದ್ದರೂ ಕೂಡ ಎಲ್ಲ ಆಯ್ಕೆಯಾದ ಅಭ್ಯರ್ಥಿಗಳನ್ನು ದಿನಾಂಕ: 01.04.2006 ರಿಂದ ಜಾರಿಗೆ ಬಂದಿರುವ ನೂತನ ಪಿಂಚಣಿ ಯೋಜನೆ ಅಡಿಯಲ್ಲಿ ಪರಿಗಣಿಸಲಾಗುವುದು. ಹಾಗೂ ಅವರ ಸೇವಾ ನಿಬಂಧನೆಗಳು ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಒಳಪಡುವುದು.

ಈ ವಿಷಯದಲ್ಲಿ ನೇಮಕಾತಿ ಹೊಂದುವ ಅಭ್ಯರ್ಥಿಗಳು ನಂತರದಲ್ಲಿ ಸಲ್ಲಿಸುವ ಯಾವುದೇ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹ ಅಭ್ಯರ್ಥಿಗಳೊಂದಿಗೆ ಯಾವುದೇ ರೀತಿಯ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.

## 13. ಸಾಮಾನ್ಯ ಸೂಚನೆಗಳು

1) ಅಭ್ಯರ್ಥಿಗಳು ಅಧಿಸೂಚನೆಯಲ್ಲಿನ ಎಲ್ಲ ಅಂಶಗಳನ್ನು ಓದಿಕೊಂಡ ನಂತರ ಅರ್ಜಿಗಳನ್ನು ಪೂರ್ಣವಾಗಿ ಭರ್ತಿ ಮಾಡುವುದು. ಸಾಧ್ಯವಾದಷ್ಟು ಮಟ್ಟಿಗೆ ಅರ್ಜಿಯಲ್ಲಿ ನಮೂದಿಸಲಾಗುವ ಅಕ್ಷರಗಳು ಮತ್ತು ಸಂಖ್ಯೆಗಳು ಸ್ಪಷ್ಟವಾಗಿ ಗೋಚರಿಸುವಂತೆ ಇರಬೇಕು.
2) ಕರ್ನಾಟಕ ಲೋಕ ಸೇವಾ ಆಯೋಗ ಅಥವಾ ಬೇರೆ ಯಾವುದೇ ನೇಮಕಾತಿ ಪ್ರಾಧಿಕಾರದಿಂದ ಅನರ್ಹವೆಂದು ಘೋಷಿಸಲ್ಪಟ್ಟ ಅಭ್ಯರ್ಥಿಯು ಈ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಬಾರದು.
3) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಆಯಾ ಹುದ್ದೆಗೆ ನಿಗದಿಪಡಿಸಲಾಗಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.
4) ನಿಗದಿಪಡಿಸಿದ ಅರ್ಹತೆ ಮತ್ತು ವಿದ್ಯಾರ್ಹತೆಯನ್ನು ಹೊಂದದೇ ಇರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಾರದು.
5) ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುವ ಅಗತ್ಯ ದಾಖಲೆಗಳ 4 (ನಾಲ್ಕು) ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.
6) ನೇಮಕಾತಿ ಹೊಂದುವ ಅಭ್ಯರ್ಥಿಗಳನ್ನು ಸರ್ಕಾರದ ನಿಯಮಗಳ ಅನುಸಾರ ಪರಿವೀಕ್ಷಣಾ ಅವಧಿಯಲ್ಲಿರಿಸಲಾಗುವುದು ಹಾಗೂ ಅವರ ಕಾರ್ಯಕ್ಷಮತೆಯನ್ನು ಪರಿಗಣಿಸಿ ಖಾಯಂಗೊಳಿಸಲಾಗುವುದು.
7) ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರವನ್ನು ಅರ್ಜಿ ನಮೂನೆಯಲ್ಲಿ ಗೊತ್ತುಪಡಿಸಿದ ಸ್ಥಳದಲ್ಲಿ ಕಡ್ಡಾಯವಾಗಿ ಅಂಟಿಸಬೇಕು. (ನಾಲ್ಕು ಅರ್ಜಿಗಳಿಗೆ)
8) ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನೀಡಿರುವ ದಾಖಲೆಗಳು ತಿದ್ದುಪಡಿಯಾಗಿರುವುದು ಅಥವಾ ಖೊಟ್ಟಿಯಾಗಿರುವುದು ಅಥವಾ ಇನ್ನಾವುದೋ ರೀತಿಯಲ್ಲಿ ನೇಮಕಾತಿ ಪಡೆಯಲು ವಾಮ ಮಾರ್ಗದ ಮೂಲಕ ಪ್ರಯತ್ನಿಸಿದ ಬಗ್ಗೆ ಕಂಡುಬಂದಲ್ಲಿ ಅಂತಹ ಅಭ್ಯರ್ಥಿಯ ಅಭ್ಯರ್ಥಿತನವನ್ನು ರದ್ದುಪಡಿಸಿ ಕಾನೂನು ರೀತಿಯ ಕ್ರಮ ಜರುಗಿಸಲಾಗುವುದು.
9) ತಡವಾಗಿ ಬಂದಂತಹ ಅಥವಾ ಅಪೂರ್ಣವಾಗಿರುವ ಅಥವಾ ನಿಗದಿತ ನಮೂನೆಯಲ್ಲಿರದ ಅಥವಾ ನಾಲ್ಕು ಪ್ರತಿಗಳಿಲ್ಲದ ಅಥವಾ ಸಂಸ್ಕರಣಾ ಶುಲ್ಕ ಭರಿಸದ ಅರ್ಜಿಗಳನ್ನು ಯಾವುದೇ ಹಿಂಬರಹ ನೀಡದೇ ಪರಿಗಣಿಸಲಾಗುವುದಿಲ್ಲ.
10) ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಿರುದ್ಧ ಯಾವುದಾದರೂ ಕ್ರಿಮಿನಲ್ ಮೊಕ್ಕದ್ದಮೆಗಳು ಇದ್ದರೆ ಅಥವಾ ಯಾವುದಾದರೂ ಪ್ರಕರಣಗಳಲ್ಲಿ ದೋಷಿಯೆಂದು ಸಜೆಯನ್ನು ಅನುಭವಿಸಿದ್ದರೆ ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.
11) ಅರ್ಜಿಗಳನ್ನು ಸಂಪೂರ್ಣವಾಗಿ ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಎಲ್ಲ ಅಗತ್ಯ ದಾಖಲೆಗಳನ್ನು ಲಗತ್ತಿಸಲಾಗಿದೆಯೇ ಎಂದು ಖಚಿತಪಡಿಸಿಕೊಳ್ಳುವುದು. (ಉದಾಹರಣೆಗೆ ಅಂಕಪಟ್ಟಿಗಳು, ಜನ್ಮ ದಾಖಲೆಗಳು/ಶಾಲೆ ಬಿಟ್ಟ ಬಗ್ಗೆ ಪ್ರಮಾಣ ಪತ್ರ/ನಡತೆ ಪ್ರಮಾಣ ಪತ್ರ ಇತ್ಯಾದಿ). ಅಭ್ಯರ್ಥಿಗಳು ಸಲ್ಲಿಸುವ ದಾಖಲೆಗಳ ನಕಲು ಪ್ರತಿಗಳಿಗೆ ಸ್ವ–ದೃಢೀಕರಣ ಮಾಡಿರಬೇಕು.
12) ಅಧಿಸೂಚನೆಯಲ್ಲಿ ಕಾಣಿಸಿದ ಹುದ್ದೆಗಳನ್ನು ಭರ್ತಿ ಮಾಡುವ ಅಥವಾ ಭರ್ತಿ ಮಾಡದೇ ಇರುವ ಹಕ್ಕು ವಿಶ್ವವಿದ್ಯಾಲಯಕ್ಕೆ ಇರುತ್ತದೆ.
13) ಅರ್ಜಿ ಮೊತ್ತ ಹಾಗೂ ಸಂಸ್ಕರಣಾ ಶುಲ್ಕ ಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.
14) ಈಗಾಗಲೇ ಸೇವೆಯಲ್ಲಿರುವಂತಹ ಅಭ್ಯರ್ಥಿಗಳು ಸಮುಚಿತ ಮಾರ್ಗದ ಮೂಲಕ ಅಂದರೆ ಅವರ ಇಲಾಖಾ ಮೇಲಾಧಿಕಾರಿಗಳ ಮೂಲಕ ತಮ್ಮ ಅರ್ಜಿಗಳನ್ನು ಸಲ್ಲಿಸುವುದು.
15) ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸಬೇಕು ಹಾಗೂ ಪ್ರತ್ಯೇಕವಾಗಿ ಅರ್ಜಿ ಶುಲ್ಕ ಮತ್ತು ಸಂಸ್ಕರಣಾ ಶುಲ್ಕವನ್ನು ಭರಿಸಬೇಕು.

16) ಅಭ್ಯರ್ಥಿಗಳು ಈ ಜಾಹೀರಾತನ್ನು ಸಂಪೂರ್ಣವಾಗಿ ಓದಿಕೊಂಡು ಯಾವ ಮೀಸಲಾತಿ ಅಡಿಯಲ್ಲಿ ಅರ್ಜಿಗಳನ್ನು ಅಹ್ವಾನಿಸಲಾಗಿದೆಯೋ ಆ ವರ್ಗದ ಅರ್ಹ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕು. ಒಂದು ವೇಳೆ ನಿಗದಿಪಡಿಸಿದ ಮೀಸಲಾತಿ ಅಡಿಯಲ್ಲಿ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದಲ್ಲಿ ಅಥವಾ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಅರ್ಹತೆ ಹೊಂದಿರದೆ ಇದ್ದಲ್ಲಿ ಸರ್ಕಾರದ ಸುತ್ತೋಲೆ ದಿನಾಂಕ: 24.01.2002 ರ ಪ್ರಕಾರ ಮೀಸಲಾತಿಯನ್ನು ಬದಲಾಯಿಸಲಾಗುವುದಿಲ್ಲ.

17) ಕರ್ನಾಟಕ ರಾಜ್ಯದ ಮತ್ತು ಕರ್ನಾಟಕದಲ್ಲಿ ವ್ಯಾಸಾಂಗ್ ಮಾಡಿರುವ ಅಭ್ಯರ್ಥಿಗಳು ಮಾತ್ರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮೀಸಲಾತಿ ಅಡಿಯಲ್ಲಿ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಹೊರರಾಜ್ಯದ ಅಭ್ಯರ್ಥಿಗಳು ಜಾತಿ ಆಧಾರದ ಮೇಲೆ ಮೀಸಲಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

17/10/23

**ಕುಲಸಚಿವರು**

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ